# ಪ್ರಗವ

ಅಹರ್ನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ಜನವರಿ 22, 2024ರಂದು ಅಯೋಧ್ಯೆಯ ಶ್ರೀ ರಾಮಮಂದಿರದ ಪ್ರಾಣ ಪ್ರತಿಷ್ಠೆ ಕಾರ್ಯಕ್ರಮಕ್ಕೆ ಬಿಜೆಪಿ ಹಿರಿಯ ನಾಯಕರಾದ ಎಲ್‌ಕೆ ಅಡ್ವಾಣಿ ಅವರಿಗೆ ಆಹ್ವಾನ ನೀಡಲಾಯಿತು. ಈ ಸಂದರ್ಭದಲ್ಲಿ ವಿಶ್ವ ಹಿಂದೂ ಪರಿಷತ್‌ನ ಅಧ್ಯಕ್ಷ ಅಲೋಕ್ ಕುಮಾರ್, ಆರೆಸ್ಸೆಸ್ ಸಹಸರಕಾರ್ಯವಾಹ ಡಾ. ಕೃಷ್ಣ ಗೋಪಾಲ್, ಅಖಿಲ ಭಾರತೀಯ ಸಂಪರ್ಕ ಪ್ರಮುಖ್ ರಾಮ್ ಲಾಲ್ ಉಪಸ್ಥಿತರಿದ್ದರು.


ಸಂಪುಟ : 45 | ಸಂಚಿಕೆ : 17 | ಮಾರ್ಗಶಿರ–ಪುಷ್ಯ | ಕಲಿಯುಗಾಬ್ದ 5125 | 01-01-2024 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


# ಅಯೋಧ್ಯೆ ರಾಮಮಂದಿರ ನಿರ್ಮಾಣ, ಭಾರತದ ಸಾಂಸ್ಕೃತಿಕ ಪುನರುತ್ಥಾನ

ಶ್ರೀರಾಮ ಈ ನೆಲದ ಸಂಸ್ಕೃತಿಯ ಆದರ್ಶಗಳ ಮೂರ್ತರೂಪ. ರಾಮನ ಜನ್ಮಭೂಮಿಯಲ್ಲೇ ರಾಮಮಂದಿರದ ನಿರ್ಮಾಣಕ್ಕಾಗಿ ನಡೆದಂತಹ ಐದು ಶತಮಾನಗಳ ಹೋರಾಟ, ಸಾಂವಿಧಾನಾತ್ಮಕ ಪ್ರಕ್ರಿಯೆಗಳೆಲ್ಲವೂ ಶ್ರೀರಾಮ ಎಂಬ ಮೌಲ್ಯ ಈ ನಾಡಿನ ಸಂಸ್ಕೃತಿಯೊಂದಿಗೆ ಬೆಸೆದ ಪರಿಯನ್ನು ಉಳಿಸಿಕೊಳ್ಳುವುದಕ್ಕಾಗಿಯೇ ಆಗಿದೆ. ಯಾವ ಮೌಲ್ಯಗಳೊಂದಿಗೆ ಭಾರತ ಜಗತ್ತನ್ನು ತನ್ನ ಕುಟುಂಬ ಎಂದು ಹೇಳಿತೋ ಅಂತಹ ಮೌಲ್ಯಗಳ ಪ್ರತೀಕವಾದ ಶ್ರೀರಾಮನಿಗೆ ಅವನ ಜನ್ಮಸ್ಥಳವಾದ ಅಯೋಧ್ಯೆಯಲ್ಲೇ ಮಂದಿರ ನಿರ್ಮಾಣವಾಗುತ್ತಿರುವುದನ್ನು ಜಗತ್ತು ಸಂಭ್ರಮಿಸುತ್ತಿದೆ. ಶ್ರೀರಾಮನ ಮಂದಿರ ಪ್ರಪಂಚದ ಜನರ ಸಂತಸಕ್ಕೆ ಕಾರಣವಾಗಿರಬೇಕಾದರೆ ರಾಮ ಸಾಂಸ್ಕೃತಿಕವಾಗಿ ಜಗದ್ವ್ಯಾಪಿಯಾಗಿದ್ದಾನೆ ಎಂದೇ ಅರ್ಥ.

**ರಾಮನೆಂದರೆ ಆದರ್ಶ:** ಶ್ರೀರಾಮ ಜಗತ್ತಿನ ಎಲ್ಲಾ ಸಾತ್ವಿಕತೆಗೂ ಪರಮೋಚ್ಚ ನಿದರ್ಶನವಾಗಬಲ್ಲ ಆದರ್ಶ. ಮಗನಾಗಿ, ಪತಿಯಾಗಿ, ಪ್ರಿಯತಮನಾಗಿ, ಸಹೋದರನಾಗಿ, ಸ್ನೇಹಿತನಾಗಿ, ತಂದೆಯಾಗಿ ಎಲ್ಲದಕ್ಕಿಂತ ಮಿಗಿಲಾಗಿ ಮನುಷ್ಯ ಜನ್ಮದ ಕರ್ತವ್ಯವನ್ನು ಸಾರುವ ಮಾನವತಾವಾದಿಯಾಗಿ ರಾಮ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದಾನೆ. ಹಾಗಾಗಿಯೇ ವಿಶ್ವದಲ್ಲಿ ಬಂಧುತ್ವದ ಅಗ್ರಗಣ್ಯ ಉದಾಹರಣೆಯಾಗಿ ಶ್ರೀರಾಮ ನಿಲ್ಲುತ್ತಾನೆ. ಭಾರತದ ಸಂಸ್ಕೃತಿಯ ವಿಕಾಸ ಶ್ರೀರಾಮನ ಮೌಲ್ಯಗಳಾಧಾರಿತವಾಗಿಯೇ ಆಗಿದೆ.



**ರಾಮನೆಂದರೆ ಕರ್ತವ್ಯ:** ಇಂದಿಗೂ ಶ್ರೀರಾಮನ ಆಡಳಿತದ ವೈಖರಿ ಜಗತ್ತಿಗೆ ಮಾದರಿಯಾಗಿದೆ. ಭಾರತದ ಆಡಳಿತ ವ್ಯವಸ್ಥೆಯ ಪರಮಗುರಿ ಭಾರತವನ್ನು 'ರಾಮರಾಜ್ಯ' ಆಗಿಸುವುದೇ ಆಗಿದೆ. ಶ್ರೀರಾಮ ಯಾಕೆ ತನ್ನ ಆಡಳಿತದ ಕಾರಣಕ್ಕಾಗಿ ಇಂದಿಗೂ ಪ್ರಸ್ತುತವಾಗಿದ್ದಾನೆಂದರೆ ಪ್ರಜಾಪ್ರಭುತ್ವದ ಆಶಯವಾದ 'ಜನರಿಂದ, ಜನರಿಗಾಗಿ, ಜನರಿಗೋಸ್ಕರ' ಎನ್ನುವುದನ್ನು ಆತ ಅಕ್ಷರಶಃ ಅಂದೇ ಪಾಲಿಸಿದ್ದನು. ತನ್ನ ಪ್ರಜೆಗಳ ಕ್ಷೇಮಕ್ಕಾಗಿ ಶ್ರಮಿಸುವುದು ಆತನ ಪ್ರಮುಖ ಜವಾಬ್ದಾರಿಯಾಗಿತ್ತು. ಯಾವುದೇ ರೀತಿಯಲ್ಲೂ ತನ್ನ ಪ್ರಜೆಗಳಿಗೆ ತೊಂದರೆಯಾಗದಂತೆ ತನ್ನ ನೀತಿಗಳನ್ನು ರೂಪಿಸಿಕೊಂಡಿದ್ದನು. ಅಂತಹ ಶ್ರೀರಾಮನ ಆಡಳಿತದ ಪರಿಯಲ್ಲೇ ಸ್ವಾತಂತ್ರ್ಯೋತ್ತರ ಭಾರತವೂ ಮುನ್ನಡೆಯಬೇಕೆಂಬ ಆಶಯ ಮೂಲ ಸಂವಿಧಾನದಲ್ಲಿ ಬಾಲರಾಮನ ಚಿತ್ರದ ಮೂಲಕ ವ್ಯಕ್ತಗೊಂಡಿದೆ. ಇದು ಇಲ್ಲಿನ ಪ್ರತಿ ಪ್ರಜೆಯೂ, ಜನಪ್ರತಿನಿಧಿಯೂ ಶ್ರೀರಾಮನ ಹಾಗೆ ಕರ್ತವ್ಯನಿಷ್ಠರಾಗಿರಬೇಕು ಎನ್ನುವುದರ ಸಂಕೇತವಾಗಿದೆ.

**ರಾಮ ಅಖಂಡತೆಯ ಪ್ರತೀಕ:** ಭಾರತದ ಅಖಂಡತೆಯ ಪ್ರತೀಕ ಶ್ರೀರಾಮ. ತನ್ನ ವ್ಯಕ್ತಿತ್ವದ ಮೂಲಕ ಇಡೀ ರಾಷ್ಟ್ರವನ್ನು ಒಂದಾಗಿಸಿದ ಮಹಾನ್ ಪುರುಷ. ರಾಮ ನಡೆದ ಹಾದಿ ರಾಮಾಯಣವೆಂದಿಸಿತು. ರಾಮಾಯಣ ಸಂಪೂರ್ಣ ಭಾರತವನ್ನು ಬೆಸೆಯಿತು. ಅದಕ್ಕೆ ಸಾಕ್ಷಿಯಂತೆ ಭಾರತದ ಪ್ರತಿ ಹಳ್ಳಿಯ ಬಹುತೇಕ ಮನೆಗಳಲ್ಲಿ ಮಕ್ಕಳಿಗೆ ರಾಮನ ವಿವಿಧ ನಾಮಗಳನ್ನೇ ಹೆಸರನ್ನಾಗಿಟ್ಟಿರುವುದನ್ನು ನೋಡುತ್ತೇವೆ. ಅಯೋಧ್ಯೆಯಿಂದ ರಾಮೇಶ್ವರದವರೆಗೂ ಆತ ಸರ್ವರ ರಾಮನಾಗಿ ಪೂಜಿಸಲ್ಪಡುತ್ತಾನೆ. ಪ್ರತಿ ಹಳ್ಳಿಯೂ ರಾಮ ಮತ್ತು ರಾಮಾಯಣದ ಕುರಿತಾದ ಐತಿಹ್ಯವನ್ನು ಹೇಳುತ್ತದೆ. ಒಟ್ಟಿನಲ್ಲಿ ಜನ, ಮನ, ಮನೆಯನ್ನು ರಾಮ ಆವರಿಸಿಕೊಂಡಿದ್ದಾನೆ. ಸಾಂಸ್ಕೃತಿಕವಾಗಿ ರಾಷ್ಟ್ರವನ್ನು ಐಕ್ಯಗೊಳಿಸಿದ್ದಾನೆ.

**ರಾಮನೆಂದರೆ ಕ್ಷಾತ್ರ:** ಭಾರತದ ಕ್ಷಾತ್ರಪರಂಪರೆ ಅನುಸರಿಸಬೇಕಾದ ನೀತಿಯನ್ನು ಬಹಳ ಸ್ಪಷ್ಟವಾಗಿ ತಿಳಿಸಿದ ಮೊದಲ ಅರಸ ಶ್ರೀರಾಮ.



ನಮ್ಮ 'ರಾಷ್ಟ್ರಧರ್ಮ'ಕ್ಕೆ ವಿರೋಧಿಯಾಗಿ ನಿಲ್ಲುವಂತಹ ಯಾವುದೇ ದುಷ್ಟಶಕ್ತಿ ಯಾವುದೇ ರೂಪದಲ್ಲಿದ್ದರೂ ಕನಿಕರ ತೋರಿಸದೆ ಸಂಹರಿಸಬೇಕು ಎನ್ನುವುದನ್ನು ತಿಳಿಸುವವನು ಶ್ರೀರಾಮ. ಈ ನೆಲದ ಸತ್ವಕ್ಕೆ ಹಾನಿಯನ್ನುಂಟು ಮಾಡುವವರು ಯಾರೇ ಆಗಿರಲಿ, ಅದು ಮಹಿಳೆಯೇ ಆಗಿದ್ದರೂ ಧರ್ಮಕ್ಕೆ ಘಾತವನ್ನುಂಟು ಮಾಡಿದರೆ ಅವರನ್ನು ಶಿಕ್ಷಿಸಬೇಕು ಎನ್ನುವುದನ್ನು ರಾಮಾವತಾರದಲ್ಲಿನ ತಾಟಕೀವಧೆ, ಶೂರ್ಪನಖಿ ಸಂಹಾರ, ಲಂಕಿಣಿಯನ್ನು ಪರಾಭವಗೊಳಿಸುವರೆಗಿನ ಅನೇಕ ನಿದರ್ಶನಗಳು ತಿಳಿಸುತ್ತವೆ.

**ಜಗದಗಲ ರಾಮ:** ರಾಮ ವ್ಯಕ್ತಿಯಲ್ಲ ಜಗತ್ತಿನ ಶಾಂತಿಯನ್ನು ಕಾಪಾಡಬಲ್ಲ ಶಕ್ತಿಯೆನ್ನುವುದನ್ನು ಎಂದೋ ಜಗತ್ತು ಅರಿತುಕೊಂಡಿದೆ. ರಾಮಮಂದಿರ ನಿರ್ಮಾಣವಾಗುತ್ತಿರುವ ಈ ಸುಸಂದರ್ಭದಲ್ಲಿ ಮತ್ತೊಮ್ಮೆ ಅದು ವ್ಯಕ್ತವಾಗುತ್ತಿದೆ. ಇದಕ್ಕೆ ಉದಾಹರಣೆಯಾಗಿ ನೀಡುವುದಾದರೆ ಇದುವರೆಗೂ ರಾಮನನ್ನು ತನ್ನವನನ್ನಾಗಿಕೊಳ್ಳುವ ಪ್ರಯತ್ನ, ತಮ್ಮ ಕಲ್ಪನೆಯ ರಾಮನನ್ನು ವರ್ಣಿಸುವ ಪ್ರಕ್ರಿಯೆ ಇಂದಿಗೂ ನಡೆಯುತ್ತಿದೆ. ಈಗಾಗಲೇ ರಚಿತಗೊಂಡಿರುವ ನೂರಾರು ಪ್ರಕಾರದ ರಾಮಾಯಣಗಳು ಇದಕ್ಕೆ ಸಾಕ್ಷಿ. ಹಲವು ದೇಶಗಳಲ್ಲಿ ತಮ್ಮನ್ನಾಳುವ ಅರಸರುಗಳ ಆದರ್ಶ ಶ್ರೀರಾಮನೇ ಆಗಿದ್ದಾನೆ ಎನ್ನುವುದು ಹಲವು ಸಾಕ್ಷ್ಯಗಳು ತಿಳಿಸುತ್ತವೆ. ಜಗತ್ತಿನ ಶಾಂತಿ ನಿರ್ಮಾಣ ಮಾಡುವುದಕ್ಕೆ ಶ್ರೀರಾಮನ ಆದರ್ಶಗಳ ಅಗತ್ಯ ಎನ್ನುವುದನ್ನು ವಿಶ್ವದ ಜನರು ಅರಿತಿದ್ದಾರೆ. ಅದಕ್ಕಾಗಿಯೇ ಜಗತ್ತಿನ ಜನರು ರಾಮಮಂದಿರ ನಿರ್ಮಾಣಕ್ಕೆ ಸಹಕರಿಸಿದ್ದಾರೆ, ರಾಮಮಂದಿರದಲ್ಲಿ ರಾಮಲಲ್ಲಾನ ಪ್ರಾಣಪ್ರತಿಷ್ಠೆಯನ್ನು ಸಂಭ್ರಮಿಸುತ್ತಿದ್ದಾರೆ.

**ಎಲ್ಲರ ರಾಮ:** ಸಂಪೂರ್ಣ ರಾಮಾವತಾರದ ಉದ್ದೇಶವೇ ಧರ್ಮ ಸಂಸ್ಥಾಪನೆ. ನೊಂದವರ ಧ್ವನಿಯಾಗಿ ಶ್ರೀರಾಮ ಅವರ ಸಂಕಷ್ಟಗಳನ್ನು ದೂರವಾಗಿಸಿದನು. ಕೈಕೇಯಿ ತಾತ್ಕಾಲಿಕವಾಗಿ ರಾಮನನ್ನು ಪಟ್ಟಾಭಿಷೇಕದಿಂದ ತಪ್ಪಿಸಿದ್ದಳು ಆದರೆ ಆತನ ಕರ್ತವ್ಯದಿಂದಲ್ಲ. ಒಂದರ್ಥದಲ್ಲಿ ರಾಮನ ವನವಾಸ ಆತನ ಕರ್ತವ್ಯದ ವ್ಯಾಪ್ತಿಯನ್ನು ಹೆಚ್ಚಿಸಿತು. ಋಷಿಮುನಿಗಳ, ಅಡವಿ ಜನರ, ವಾನರ ವೀರರ ಹಾಗೂ ಆತನ ಬಳಿ ಸಹಾಯವನ್ನು ಬೇಡಿ ಬಂದವರ ಸಮಸ್ಯೆಗಳನ್ನು ರಾಮ ಪರಿಹರಿಸುವುದಕ್ಕೆ ಸಾಧ್ಯವಾಯಿತು. ಎಲ್ಲದಕ್ಕಿಂತಲೂ ಮುಖ್ಯವಾಗಿ ಇಂದಿಗೂ ಅನರ್ಥದ ಸಿದ್ಧಾಂತಗಳ ಮೂಲಕ ಕಾಡು–ನಾಡಿನ ಬಂಧವನ್ನು ಕಳಚುವ ಪ್ರಯತ್ನಗಳು ವಿಫಲವಾಗುತ್ತಿದೆ ಏಕೆಂದರೆ ಶ್ರೀರಾಮನ ವ್ಯಕ್ತಿತ್ವವೆಂಬ ದೃಢವಾದ ಬಂಧ ಕಾಡು–ನಾಡನ್ನು ಬೆಸೆದಿದೆ. ಒಂದೇ ಸಂಸ್ಕೃತಿಯ ಅಡಿಯಲ್ಲಿ ಉಳಿಸಿದೆ. ಹಾಗಾಗಿಯೇ ರಾಮನನ್ನು ಎಲ್ಲರ ರಾಮ ಎಂದು ಸಂಬೋಧಿಸಿರುವುದು. ಇದರ ಕಾರಣಕ್ಕಾಗಿಯೇ ಪ್ರತಿ ಊರಿನಿಂದ ಮಣ್ಣು ಮತ್ತು ನದಿಗಳ ನೀರನ್ನು ಸಂಗ್ರಹಿಸಿ ಸಾಂಕೇತಿಕವಾಗಿ ಒಟ್ಟು ಭಾರತವನ್ನೊಳಗೊಂಡು ಈ ನಾಡಿನ ಶ್ರದ್ಧಾಕೇಂದ್ರವಾಗಿ ರಾಮಮಂದಿರ ನಿರ್ಮಾಣವಾಗುತ್ತಿದೆ. ಭಾರತದಲ್ಲೂ ಪ್ರತಿ ಭಾರತೀಯನೂ ತನ್ನ ತನು, ಮನ, ಧನ ಸಹಕಾರದಿಂದ ರಾಮಮಂದಿರ ನಿರ್ಮಾಣದ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದಾನೆ.

**ರಾಮಮಂದಿರ ಸಂಸ್ಕೃತಿವಾಹಕ:** ರಾಮಮಂದಿರದ ನಿರ್ಮಾಣದ ಹಾದಿಯನ್ನು ಗಮನಿಸಿದರೆ ಐದು ಶತಮಾನಗಳ ಕಾಲ ರಾಮನ ಅಸ್ತಿತ್ವಕ್ಕಾಗಿ ಹೋರಾಟಗಳು ನಡೆದಿವೆ. ಇಲ್ಲಿ ರಾಮನ ಅಸ್ತಿತ್ವವೆನ್ನುವುದು ಈ ನಾಡಿನ ಸಂಸ್ಕೃತಿಯ ಅಸ್ತಿತ್ವವೇ ಆಗಿದೆ. ಇದನ್ನು ಅರಿತು ಅಂದಿನಿಂದ ಇಂದಿನವರೆಗೂ ಪರಂಪರೆಯಿಂದ ಪರಂಪರೆಗೆ, ಪೀಳಿಗೆಯಿಂದ ಪೀಳಿಗೆಗೆ ಸಾಂಸ್ಕೃತಿಕ ಮಹತ್ವವನ್ನು ಸಾರುವ ಮತ್ತು ಸದಾ ಸಾಂಸ್ಕೃತಿಕ ಜಾಗೃತಿಯನ್ನು ಕಾಯ್ದುಕೊಳ್ಳುವ ಕಾಯಕವನ್ನು ನಮ್ಮ ಪೂರ್ವಜರು ಮಾಡಿಕೊಂಡು ಬಂದಿದ್ದಾರೆ. ಅದರಿಂದಾಗಿ ಇಂದು ಹೊಸತೊಂದು ಸಾಂಸ್ಕೃತಿಕ ಪುನರುತ್ಥಾನಕ್ಕೆ ನಾವೆಲ್ಲರೂ ಸಾಕ್ಷಿಯಾಗುವಂತೆ ಮಾಡಿದ್ದಾರೆ.



**ರಾಮನೆಂದರೆ ಸಾಮರಸ್ಯ:** ಶ್ರೀರಾಮ ಸಾಮರಸ್ಯದ ಅಗ್ರಗಣ್ಯ ಮೇಲ್ಪಂಕ್ತಿ. ಸಾರ್ವಕಾಲಿಕವಾಗಿ ಮನುಕುಲದಲ್ಲಿ ನೆಲೆಸಬೇಕಾದ ಸಾಮರಸ್ಯಕ್ಕೆ ಅತ್ಯಂತ ಔಚಿತ್ಯಪೂರ್ಣ ಆದರ್ಶವಾಗಿ ರಾಮ ಗುರುತಿಸಿಕೊಳ್ಳುತ್ತಾನೆ. ತನ್ನ ಇಡೀ ಜೀವಿತಾವಧಿಯಲ್ಲಿ ಆತ ಭೇಟಿಯಾದ ಎಲ್ಲಾ ವ್ಯಕ್ತಿಗಳಿಗೂ ಆತ ಅತ್ಯಂತ ಆಪ್ತನಾಗಿದ್ದಾನೆ, ತನ್ನ ವ್ಯಕ್ತಿತ್ವದ ಕಾರಣಕ್ಕಾಗಿ ದೇವರೂ ಆಗಿದ್ದಾನೆ. ಅಹಲ್ಯೆಯ ಶಾಪ ವಿಮೋಚನೆಯಲ್ಲಿ, ಗುಹಾನೆಂಬ ಅಡವಿರಾಜನ ಸ್ನೇಹವನ್ನು ಬಿಗಿದಪ್ಪಿಕೊಳ್ಳುವಲ್ಲಿ, ಶಬರಿಯ ವಾತ್ಸಲ್ಯವನ್ನು ಸವಿಯುವಲ್ಲಿ, ಸುಗ್ರೀವನಿಗೆ ಆಪದ್ಬಾಂಧವನಾಗುವಲ್ಲಿ, ಜಾಂಬವಂತನ ಗೌರವವನ್ನು ಪಡೆಯುವಲ್ಲಿ, ವಾಲಿಯ ಮಗ ಅಂಗದನಿಗೂ ಮಾದರಿಯಾಗುವಲ್ಲಿ, ಶತ್ರುವಾದ ರಾವಣನ ತಮ್ಮ ವಿಭೀಷಣನ ಮಿತ್ರನಾಗುವಲ್ಲಿ, ಎಲ್ಲದಕ್ಕಿಂತ ಮಿಗಿಲಾಗಿ ಸಕಲ ಸದ್ಗುಣಗಳ ಸಾಕಾರಮೂರ್ತಿಯಾದ ಹನುಮನ ಹೃದಯವೇ ಆಗುವುದರಲ್ಲಿ ಶ್ರೀರಾಮ ಗೆಲ್ಲುತ್ತಾನೆ.

**ರಾಮಮಂದಿರ ಯಾರ ವಿರುದ್ಧವೂ ಅಲ್ಲ:** ರಾಮಮಂದಿರದ ನಿರ್ಮಾಣ ಯಾವುದೋ ಒಂದು ಮತದ ವಿರುದ್ಧವಾದದ್ದಲ್ಲ. ರಾಮ ಮಂದಿರವನ್ನು ಧ್ವಂಸಗೊಳಿಸಿದವನು ಬಾಬರ್ ಅನ್ನುವ ಕಾರಣಕ್ಕೆ ಆತನ ಮತದವರನ್ನೆಲ್ಲಾ ದ್ವೇಷಿಸುವ ಮನೋಭಾವವನ್ನು ಹಿಂದೂ ಸಂಸ್ಕೃತಿ ಒಳಗೊಂಡಿಲ್ಲ. ಸತ್ಯವನ್ನು ನೋಡುವಾಗ ಜಾತಿ, ಮತ, ಪಂಥದ ಸುಳಿಗೆ ನಾವು ಸಿಲುಕಿದರೆ ಅನಗತ್ಯವಾದ ಗೊಂದಲಗಳ ನಿರ್ಮಾಣವಾಗುತ್ತದೆ. ರಾಮ ಈ ರಾಷ್ಟ್ರದ ರಾಷ್ಟ್ರೀಯ ಪುರುಷ ಎನ್ನುವುದನ್ನು ಸಂವಿಧಾನವೂ ತಿಳಿಸುತ್ತದೆ. ಈ ರಾಷ್ಟ್ರದ ಎಲ್ಲಾ ಮಹಾನ್ ಪುರುಷರನ್ನು ಗೌರವಿಸುವುದು ನಮ್ಮ ಮೂಲಭೂತ ಕರ್ತವ್ಯ ಎಂದು ಸಾರುತ್ತದೆ. ಬಾಬರ್ ಈ ರಾಷ್ಟ್ರದ ಮೇಲಿನ ಆಕ್ರಮಣಕಾರ ಎನ್ನುವ ಕಾರಣಕ್ಕೆ ಆತನನ್ನು ವಿರೋಧಿಸತಕ್ಕದ್ದೇ ಹೊರತು ಆತನ ಮತದಿಂದಲ್ಲ ಎನ್ನುವುದು ಸ್ಪಷ್ಟವಿದೆ. ಹಾಗಾಗಿ ಇದು ರಾಷ್ಟ್ರೀಯತೆ ಮತ್ತು ಅರಾಷ್ಟ್ರೀಯತೆಯ ನಡುವಿನ ಸಂಘರ್ಷವೆನ್ನುವುದನ್ನು ಅರಿಯುವ ಅಗತ್ಯತೆ ಇದೆ.

ರಾಮಮಂದಿರದಲ್ಲಿ ಬೆಳಗುವ ಹಣತೆಗಳು ಜಗತ್ತಿಗೆ ಶ್ರೀರಾಮನ ಆದರ್ಶನಗಳ ಕಿರಣಗಳನ್ನು ಪಸರಿಸುತ್ತವೆ, ಭಾರತೀಯ ಆಡಳಿತ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆಯನ್ನು ತರಬಲ್ಲ ಪ್ರೇರಣೆಯನ್ನು ಒದಗಿಸುತ್ತದೆ. ಪ್ರತಿ ಪ್ರಜೆಯಲ್ಲೂ ಮರ್ಯಾದಾ ಪುರುಷೋತ್ತಮ ರಾಮ ನಮ್ಮ ಆದರ್ಶ ಎನ್ನುವುದನ್ನು ಮರಳಿ ನೆನಪಿಸಿ ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಲು ಕಾರಣವಾಗುತ್ತದೆ. ತ್ರೇತಾ ಯುಗದಲ್ಲಿ ಇಡೀ ಭಾರತವನ್ನು ತನ್ನ ಪ್ರೀತಿಯ ಮೂಲಕ ಬೆಸೆದ ರಾಮ ಇನ್ನುಮುಂದೆ ರಾಮಮಂದಿರ – ರಾಷ್ಟ್ರಮಂದಿರ ಎನ್ನುವ ಶ್ರದ್ಧೆಯ ಮೂಲಕ ಈ ರಾಷ್ಟ್ರವನ್ನು ಒಗ್ಗೂಡಿಸುತ್ತಾನೆ. ಸಮಾಜವನ್ನು ವಿಘಟಿಸಲು ಪ್ರಯತ್ನಿಸುತ್ತಿರುವ ಮಂತ್ರವಿಪ್ಲವಗಳಿಗೆ ಶ್ರೀರಾಮನ ಕ್ಷಾತ್ರತೇಜದ ಮಂತ್ರ ಉತ್ತರವಾಗಲಿದೆ. ಜನವರಿ 22, 2024ರಂದು ರಾಮಲಲ್ಲಾನ ಪ್ರಾಣಪ್ರತಿಷ್ಠಾಪನೆಯೊಂದಿಗೆ ಈ ರಾಷ್ಟ್ರದ ಸಾಂಸ್ಕೃತಿಕ ಪುನರುತ್ಥಾನದ ಪ್ರತಿಷ್ಠಾಪನೆಯೂ ಆಗಲಿದೆ. ■

## ಸಂಸ್ಮರಣೆ | ಶ್ರೀರಾಮಾಯಣ ದರ್ಶನಂ

"ಐರೋಪ್ಯರಿಗೆ ಈ ಶ್ರೀರಾಮಾಯಣ ದರ್ಶನಂ ಮಹಾಕಾವ್ಯದ ಗುಣಧರ್ಮ ತಿಳಿದಿದ್ದರೆ ನೋಬೆಲ್ ಪಾರಿತೋಷಕಕ್ಕೆ ಅದನ್ನು ಬಿಟ್ಟರೆ ಯಾವ ಕೃತಿಯೂ ಅರ್ಹವಲ್ಲ ಎಂದು ಅವರು ನಿರ್ಧರಿಸುತ್ತಿದ್ದರು" ಎಂದವರು ಈ ನಾಡಿನ ಪ್ರಸಿದ್ಧ ಪತ್ರಕರ್ತ ಮತ್ತು ಲೇಖಕ ಪಾಟೀಲ ಪುಟ್ಟಪ್ಪ. ಅವರ ಮಾತು ಅಕ್ಷರಶಃ ನಿಜ.ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಈ ನೆಲದ ಸರ್ವಶ್ರೇಷ್ಠ ಮಹಾಕಾವ್ಯ. 'ಪಂಪ ಮತ್ತು ರನ್ನನ ಕಾಲಕ್ಕೇ ಮಹಾಕಾವ್ಯಗಳ ಯುಗ ಮುಗಿದು ಹೋಯಿತು ಈಗ ಅದರ ಸೃಷ್ಟಿ ಕಷ್ಟ' ಎಂಬ ಮಾತುಗಳ ಮಧ್ಯೆಯೇ ಕುವೆಂಪು ಬಹು ಸಲೀಸಾಗಿ ಅದ್ಭುತ ಮತ್ತು ಪರಿಣಾಮಕಾರಿಯಾದ ಮಹಾಕಾವ್ಯವೊಂದನ್ನು ಬರೆದು ಇಡೀ ಕನ್ನಡ ಸಾಹಿತ್ಯ ಲೋಕಕ್ಕೆ ಹೊಸ ಭಾಷ್ಯ ಬರೆದರು.

**ಪರಿಚಯ:** ಶ್ರೀ ರಾಮಾಯಣ ದರ್ಶನಂ ಕುವೆಂಪು ಅವರ ನಿಜವಾದ ಸಾಧನೆ. ಅದು ಕನ್ನಡ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದ ಮಹಾಕಾವ್ಯ. ಮೂಲದಲ್ಲಿ ವಾಲ್ಮೀಕಿಯ ರಾಮಾಯಣವನ್ನು ಆಧರಿಸಿ ಈ ಮಹಾಕಾವ್ಯವನ್ನು ಕುವೆಂಪು ರಚಿಸಿದ್ದರೂ ಇಲ್ಲಿ ನಮಗೆ ಬೇರೆಯದ್ದೇ ಲೋಕ ಕಾಣುತ್ತದೆ. ಆಧುನಿಕತೆಗೆ ತಕ್ಕುದಾದ ತತ್ವಗಳನ್ನು ತಮ್ಮ ಈ ಮಹಾಕಾವ್ಯದಲ್ಲಿ ಪ್ರತಿಪಾದಿಸಿ ಕುವೆಂಪು ಹೊಸ ಆಯಾಮಗಳನ್ನು ಸೃಷ್ಟಿಸಿದ್ದಾರೆ ಮತ್ತು ನಮ್ಮನ್ನು ಚಿಂತನೆಗೆ ಹಚ್ಚಿದ್ದಾರೆ. ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಕಾವ್ಯದಲ್ಲೂ ರಾಮನಿದ್ದಾನೆ. ಅವನು ಮಾನವ ಪ್ರೀತಿಯ ರಾಮ. ಅಹಿಂಸಾವಾದಿ ರಾಮ. ವಾಲ್ಮೀಕಿ ತನ್ನ ರಾಮಾಯಣದಲ್ಲಿ ಯುದ್ಧದ ಕತೆಯನ್ನು ಹೇಳಿದರೆ ಕುವೆಂಪು ತಮ್ಮ ಮಹಾಕಾವ್ಯದಲ್ಲಿ ಮನುಷ್ಯನ ಸಹಜ ಗುಣ ಮತ್ತು ಅವನ ಅಂತಃಕರಣವನ್ನು ಬಿಚ್ಚಿಟ್ಟಿದ್ದಾರೆ. ಬಹುಮುಖ್ಯವಾಗಿ ಈ ಮಹಾಕಾವ್ಯದುದ್ದಕ್ಕೂ ಸ್ತ್ರೀ ಸಮಾನತವಾದ ಕಾಣುತ್ತದೆ. ಕುವೆಂಪು ಹೆಣ್ಣಿನ ದನಿಯಾಗಿದ್ದಾರೆ. ಹೆಣ್ಣಿನ ಮೂಲಕವೇ ಈ ನೆಲದ ಎಲ್ಲಾ ಕತೆಯನ್ನು ಹೇಳಿಸಿದ್ದಾರೆ. ಮಹಾಕಾವ್ಯದಲ್ಲಿ ಹೆಣ್ಣು ಗಂಡು ಇಬ್ಬರನ್ನೂ ಒಂದೇ ತೂಕದಲ್ಲಿ ಇಟ್ಟಿದ್ದಾರೆ.

ಇನ್ನು ಶ್ರೀ ರಾಮಾಯಣ ದರ್ಶನಂ ಕಾವ್ಯದಲ್ಲಿ ರಾಮ ನಾಯಕನಲ್ಲ. ಅವನೊಬ್ಬ ಸಾಮಾನ್ಯ ಪಾತ್ರಧಾರಿ ಅಷ್ಟೇ. ಊರ್ಮಿಳಾ, ಮಂಥರೆ,




ಸುಗ್ರೀವ ಈ ಪಾತ್ರಗಳಿಗೆ ಜೀವ ತುಂಬುವ ಮತ್ತು ಅವರ ಮೂಲಕ ಆಧುನಿಕ ಜಗತ್ತಿನ ವಾಸ್ತವತೆಯನ್ನು ತೆರೆದಿಡುವ ಪ್ರಯತ್ನವನ್ನು ಕುವೆಂಪು ಮಾಡಿದ್ದಾರೆ. ಅವರು ಯಾವ ಪಾತ್ರಕ್ಕೂ ಪುರಾಣದ ಪೋಷಾಕುಗಳನ್ನು ತೊಡಿಸದೆ ಮತ್ತು ದೈವತ್ವದ ಸ್ಥಾನವನ್ನು ಕೊಡದೆ ಸಾಮಾನ್ಯ ವ್ಯಕ್ತಿಗಳಂತೆ ಸಮಾಜದ ಮುಂದೆ ತಂದು ನಿಲ್ಲಿಸಿದ್ದಾರೆ. ಹಾಗೆ ಎಲ್ಲಿಯೂ ನಡೆದು ಹೋದ ಕತೆ ಎಂದು ಬಿಂಬಿಸದೆ ನಡೆಯುತ್ತಿರುವ ಕತೆ ಎಂಬಂತೆ ತಮ್ಮ ಅಪಾರ ಕಾವ್ಯ ಕಸುವಿನಿಂದ ಸಮರ್ಥವಾಗಿ ತೋರಿಸಿದ್ದಾರೆ. ಕುವೆಂಪು ತಮ್ಮ ಈ ಮಹಾಕಾವ್ಯದಲ್ಲಿ ಜಾತ್ಯಾತೀತ, ಧರ್ಮಾತೀತ ಮತ್ತು ಸಮಾನತೆಯ ತತ್ತ್ವವನ್ನು ಸಾರಿದ್ದಾರೆ. ಎಲ್ಲರೊಳಗೊಂದಾಗಿ ಬದುಕುವ ಇರಾದೆ ತೋರಿದ್ದಾರೆ. ಅವರು ಸ್ವಾತಂತ್ರ್ಯ ಪೂರ್ವ ಭಾರತದ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ಇಲ್ಲಿ ಆ ಕಾಲದ ಸಂಕೀರ್ಣ ಅನುಭವವೂ ಇದೆ. ಸರಳ ರಗಳೆ, ಛಂದಸ್ಸು, ಅಲಂಕಾರ ಮತ್ತು ಉಪಮೆಗಳ ಬಳಕೆ ಮಾಡಿ ಮಹಾಕಾವ್ಯವನ್ನು ಪ್ರಸ್ತುತಿ ಮಾಡಿರುವ ಕುವೆಂಪು ನಿಜಕ್ಕೂ ಕಾವ್ಯ ನ್ಯಾಯವನ್ನು ಒದಗಿಸಿದ್ದಾರೆ.

ಶ್ರೀ ರಾಮಾಯಣ ದರ್ಶನಂ ಕಾವ್ಯದಲ್ಲಿ ಅಯೋಧ್ಯಾ, ಕಿಷ್ಕಿಂದ, ಲಂಕಾ ಮತ್ತು ಶ್ರೀ ಸಂಪುಟಂ ಎಂಬ ನಾಲ್ಕು ಸಂಪುಟಗಳಿವೆ. ಬರೋಬ್ಬರಿ 22,291 ಸಾಲುಗಳನ್ನು ಕುವೆಂಪು ಇಲ್ಲಿ ಬರೆದಿದ್ದಾರೆ. ಶ್ರೀ ರಾಮಾಯಣ ದರ್ಶನಂ ಕನ್ನಡದ ಮಹೋನ್ನತ ಕೃತಿ. ಎಲ್ಲಾ ಅರ್ಹತೆಗಳನ್ನೂ ಮೀರಿದ ಕೃತಿ. ಎಲ್ಲದಕ್ಕೂ ಅರ್ಹವಾದ ಕೃತಿ.

ಹೆಚ್ಚಿನ ಮಾಹಿತಿ: ಶ್ರೀ ರಾಮಾಯಣ ದರ್ಶನಂ ಕೃತಿಯ ಮೊದಲ ಭಾಗ 1949 ರಲ್ಲಿ ಮತ್ತು ಎರಡನೆಯ ಭಾಗ 1951 ರಲ್ಲಿ ಪ್ರಕಟವಾಗಿದೆ. ಈ ಕೃತಿಗೆ 1968ರಲ್ಲಿ ಕನ್ನಡದ ಮೊದಲ ಜ್ಞಾನಪೀಠ ಪ್ರಶಸ್ತಿ ದಕ್ಕಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಕೂಡ ಲಭಿಸಿದೆ. ಸಾಕಷ್ಟು ಭಾರತೀಯ ಭಾಷೆಗಳಿಗೆ ಈ ಕೃತಿ ಅನುವಾದಗೊಂಡಿದೆ.

## ಶ್ರೇಷ್ಠ ಕರ್ಮಯೋಗಿ–ಶ್ರೀ ಅಜಿತ್ ಕುಮಾರ್

ಸಂಘದ ಜ್ಯೇಷ್ಠ ಪ್ರಚಾರಕ ಅಜಿತ್ ಕುಮಾರ್ ಅವರು 1980ರಲ್ಲಿ ಸೇವಾ ಕ್ಷೇತ್ರದಲ್ಲಿ ಮಾದರಿ ಸಂಸ್ಥೆ "ಹಿಂದೂ ಸೇವಾ ಪತಿಷ್ಠಾನ"ದ ಸ್ಥಾಪನೆಗೆ ಕಾರಣರಾದವರು. ಮುಂದೆ ಈ ಸಂಸ್ಥೆಯ ಮೂಲಕ ವಿವಿಧ ರೀತಿಯ ಪ್ರಕಲ್ಪಗಳು ಕೂಡ ಅರಳಿದವು. ತರಬೇತಿ ನೀಡುವ ಮೂಲಕ ಜನರನ್ನು ಸೇವೆಗೆ ಸಿದ್ಧಗೊಳಿಸಬಹುದು ಹಾಗೂ ಇದರಲ್ಲಿ ಮಹಿಳೆಯರು ಕೂಡ ಪೂರ್ಣಾವಧಿಯಾಗಿ ಕೆಲಸ ಮಾಡಬಹುದು ಎಂಬ ಹೊಸ ಪರಿಕಲ್ಪನೆಗೆ ಕಾರಣೀಭೂತರಾದರು.

ಹಿಂದೂ ಸೇವಾ ಪ್ರತಿಷ್ಠಾನದ ವತಿಯಿಂದ ಸೇವೆಯಲ್ಲಿ ಆಸಕ್ತರಿರುವ ಸೇವಾವ್ರತಿಗಳಿಗೆ 40 ದಿನಗಳ ಪ್ರಶಿಕ್ಷಣವನ್ನು ನೀಡಲಾಯಿತು ಹಾಗೂ ಇದರ ಮೊದಲ ಸೇವಾವ್ರತಿಗಳ ತಂಡದಲ್ಲಿ 23 ಯುವಕ, ಯುವತಿಯರು ಭಾಗವಹಿಸಿದ್ದರು. ಪ್ರತಿಷ್ಠಾನದ ವಿವಿಧ ಪ್ರಕಲ್ಪಗಳಾದ ನೆಲೆ, ಅರುಣ ಚೇತನ, ಪ್ರಸನ್ನಾ ಕೌನ್ಸಲಿಂಗ್ ಸೆಂಟರ್, ಸೇವಾಮಿತ್ರ, ಸುಪ್ರಜಾಗಳಿಗೆ ಸೇವಾವ್ರತಿಗಳು ಈ ಪ್ರಶಿಕ್ಷಣದಿಂದಲೇ ದೊರೆತರು. ಸ್ವರ್ಗೀಯ ಶ್ರೀ ಅಜಿತ್ ಕುಮಾರರ ಈ ಪರಿಕಲ್ಪನೆಯು ವಿಶಾಲ ವಟವೃಕ್ಷವಾಗಿ ಬೆಳೆದು ನಿಂತಿದೆ.

ಅಜಿತ್ ಕುಮಾರರು ಕಾಲೇಜು ಜೀವನದಲ್ಲೆ ವಿದ್ಯಾರ್ಥಿ ಪರಿಷತ್ತಿನ ಕಾರ್ಯ ನಿರ್ವಹಿಸುತ್ತಲೇ ಅಭಾವಗ್ರಸ್ತ ಜನರ ಜೀವನವನ್ನು ಸುಧಾರಿಸುವ ಬಗ್ಗೆ ಚಿಂತಿಸುತ್ತಿದ್ದರು. ಅಜಿತ್ ಕುಮಾರರು 1957ರಲ್ಲಿ ಸಂಘದ ಪ್ರಚಾರಕರಾಗಿ ಹೊರಟ ನಂತರ 1975ರ ತನಕ ಸಂಘದ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದರು. ತುರ್ತು ಪರಿಸ್ಥಿತಿಯ ಸಮಯದಲ್ಲಿ MISA ಬಂಧಿಯ ರೂಪದಲ್ಲಿ 2 ವರ್ಷಗಳ ಕಾಲ ಜೈಲಿನಲ್ಲಿದ್ದಾಗಲೂ ಬಂಧಿತರಿಗೆ ಯೋಗ ತರಬೇತಿಯನ್ನು ನೀಡುತ್ತಿದ್ದರು. ಸಂಘದ ಶಿಕ್ಷಾ ವರ್ಗಗಳ ಪಠ್ಯಕ್ರಮಗಳಲ್ಲಿ ಯೋಗಾಭ್ಯಾಸವನ್ನು ಸೇರಿಸಿದ ಶ್ರೇಯ ಅಜಿತ್ ಅವರಿಗೆ ಸಲ್ಲುತ್ತದೆ. ಇದಕ್ಕಾಗಿ ಅವರು ಮೊದಲಿಗೆ ಮೈಸೂರಿನ ಶ್ರೀ ಪಟ್ಟಾಭಿ ಜೋಯಿಸರ ಬಳಿ ನಂತರ ಪ್ರಸಿದ್ಧ ಯೋಗಾಚಾರ್ಯ ಶ್ರೀ ಬಿ ಕೆ ಎಸ್ ಅಯ್ಯಂಗಾರ್ ಅವರ ಬಳಿ ಯೋಗ ಕಲಿತು ಯೋಗಪಟುವಾದರು.

ಸೇವಾವ್ರತಿಗಳ ತರಬೇತಿ ಪಠ್ಯಕ್ರಮಗಳ ತಯಾರಿಯಲ್ಲಿ ಅಜಿತ್ ಕುಮಾರ್ ಅವರಿಗೆ ಸಹಕರಿಸಿದ ಶ್ರೀ ದತ್ತಾತ್ರೇಯ ಹೊಸಬಾಳೆ (ಪ್ರಸ್ತುತ ಸರಕಾರ್ಯವಾಹರು) ಹೇಳುತ್ತಾರೆ, "ಸೇವೆಯ ಅವಶ್ಯಕತೆ ಇರುವವರು ಲಕ್ಷಾಂತರ ಮಂದಿ ಇದ್ದಾರೆ, ಆದರೆ



ಸೇವೆ ಮಾಡಬಲ್ಲವರು ಕೇವಲ ಬೆರಳೆಣಿಕೆಯಷ್ಟು. ಮೂಲ ಸ್ವಭಾವದಲ್ಲೇ ಸೇವಾಭಾವವನ್ನು ಹೊಂದಿರುವ ಮಹಿಳೆಯೇ ಸೇವೆಯಿಂದ ಮೈಲುಗಟ್ಟಲೆ ದೂರ ನಿಂತಿದ್ದಾಳೆ ಎಂದು ಅಜಿತರು ಚಿಂತಿಸುತ್ತಿದ್ದರು" ಎಂದು. ಬಹುಶಃ ಅವರ ಈ ಯೋಚನೆಯೇ 'ಸೇವಾವ್ರತಿ' ಪರಿಕಲ್ಪನೆಗೆ ಜೀವ ನೀಡಿರಬಹುದು. ಸೇವಾವ್ರತಿಗಳ ತರಬೇತಿ ಶಿಬಿರದಲ್ಲಿ ಭಾರತದ ಶ್ರೇಷ್ಠ ಪರಂಪರೆ, ಮಹಾಪುರುಷರ ಜೀವನ ಚರಿತ್ರೆ, ಸೇವೆಯ ಅವಶ್ಯಕತೆ, ಯೋಗ ಹಾಗೂ ಅನುಶಾಸನಗಳಂತಹ ವಿಭಿನ್ನ ವಿಷಯಗಳ ಬಗ್ಗೆ ತಿಳಿಸಿ, ಸೇವೆಗಾಗಿ ಉತ್ತಮ ವ್ಯಕ್ತಿಗಳನ್ನು ನಿರ್ಮಾಣ ಮಾಡಿ ಅವರನ್ನು ಅಭಾವಗ್ರಸ್ಥ ಸಮಾಜದ ಉನ್ನತಿಗಾಗಿ ಶ್ರಮಿಸುವಂತೆ ಮಾಡಲಾಯಿತು. ತರಬೇತಿಯ ನಂತರ ಸೇವಾವ್ರತಿಗಳು ತಮ್ಮ ಅಭಿರುಚಿಗೆ ಅನುಗುಣವಾಗಿ 3 ವರ್ಷಗಳ ಕಾಲ ತಮ್ಮ ತಮ್ಮ ಕಾರ್ಯಕ್ಷೇತ್ರಗಳಲ್ಲಿ ಸೇವಾಕಾರ್ಯಕ್ಕಾಗಿ ಸಮಯ ನೀಡುತ್ತಿದ್ದರು. ತಮ್ಮ ಜೀವನದ ಯೌವನಾವಸ್ಥೆಯ 3 ವರ್ಷವನ್ನು ಸೇವಾಕಾರ್ಯಕ್ಕಾಗಿ ಸಮರ್ಪಿಸಿಕೊಂಡ ನಂತರ ಹೆಚ್ಚಿನ ಸೇವಾವ್ರತಿಗಳು ತಮ್ಮ ಮುಂದಿನ ಜೀವನದಲ್ಲಿಯೂ ಸೇವಾವ್ರತವನ್ನು ಮುಂದುವರಿಸಿದರು.

ಸೇವಾವ್ರತಿಗಳನ್ನು ಸರಿಯಾದ ಕಾರ್ಯಕ್ಕೆ ನಿಯೋಜಿಸುವುದಷ್ಟೇ ಅಲ್ಲ ಕಾರ್ಯಕ್ಷೇತ್ರದಲ್ಲಿ ಅವರು ಸರಿಯಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವಲ್ಲೂ ಅವರ ಮಹತ್ವಪೂರ್ಣ ಪಾತ್ರ ಇರುತ್ತಿತ್ತು. ಅವರು ಕಾರ್ಯಕ್ಷೇತ್ರಗಳಿಗೆ ಭೇಟಿ ನೀಡಿ ಒಂದು ದಿನ ಸೇವಾವ್ರತಿಗಳೊಂದಿಗೆ ಇರುತ್ತಿದ್ದರು. ಅವರ ಸಹಜವಾದ ವಾತ್ಸಲ್ಯ ಹಾಗೂ ವಿಚಾರಗಳಿಂದ ಪ್ರಭಾವಿತರಾಗಿ ಅನೇಕ ಯುವಕ, ಯುವತಿಯರು ಆಜೀವಪರ್ಯಂತ ಸೇವೆಯ ಸಂಕಲ್ಪವನ್ನು ತೊಟ್ಟರು. ಸೇವೆ ಮಾಡಲು ಉತ್ತಮ ವ್ಯಕ್ತಿಗಳ ನಿರ್ಮಾಣವಾಗಬೇಕು ಎಂಬ ವಿಷಯವನ್ನು ಹಿಂದೂ ಸೇವಾ ಪ್ರತಿಷ್ಠಾನದ ಪ್ರಥಮ ನಿರ್ದೇಶಕರಾದ ಅಜಿತ್ ಕುಮಾರ್ ಅವರು ತಮ್ಮ ಸಹವರ್ತಿಗಳಲ್ಲೂ ಬಿತ್ತಿದ್ದರು.

## ಎಲ್ಲೋ ಕೇಳಿದ ಕಥೆ

### ಸೂಕ್ಷ್ಮ ದೃಷ್ಟಿ, ಸ್ಪಂದಿಸುವ ಮನೋಭಾವ



ಸಂಘವು ಇನ್ನೂ ಶೈಶವಾವಸ್ಥೆಯಲ್ಲಿದ್ದ ಸಂದರ್ಭ. ಒಮ್ಮೆ ನಾಗಪುರದಿಂದ ತುಸು ದೂರದಲ್ಲಿರುವ ತೇಲಂಖೇಡಿ ಕೆರೆಯ ಬಳಿ ನಗರದ ಶಾಖೆಗಳ ಸಹಲ್ ಏರ್ಪಾಡಾಗಿತ್ತು. ಮುಂಜಾನೆ ಹೋಗಿ ಸಂಜೆ ವಾಪಸ್ ಬರುವಂತಹ ಒಂದು ದಿನದ ಸಹಲ್ ಅದು. ಬರುವವರೆಲ್ಲರೂ ತಮ್ಮ ಊಟದ ಬುತ್ತಿಯನ್ನು ತಾವೇ ಮನೆಯಿಂದ ತರಬೇಕೆಂದು ತಿಳಿಸಲಾಗಿತ್ತು. ಆದರೆ ಒಬ್ಬಿಬ್ಬರು ಹಾಸ್ಟೆಲ್‌ನಲ್ಲಿದ್ದ ವಿದ್ಯಾರ್ಥಿಗಳೂ ಇದ್ದರು. ಅವರಿಗೆ ಅಷ್ಟು ಬೇಗ ಬುತ್ತಿ ತಯಾರಿಸಿ ಕೊಡುವವರು ಯಾರು? ಅವರು ಹಿಂದಿನ ರಾತ್ರಿಯ ತಮ್ಮ ಊಟದಲ್ಲಿ ಮಿಗಿಸಿ ಅದನ್ನೇ ಬುತ್ತಿಯಾಗಿ ತಂದಿದ್ದರು. ವಿದ್ಯಾರ್ಥಿಗಳದೇ ಸಹಲ್ ಎಂದ ಮೇಲೆ ಸಹಜವಾಗಿ ಆಟ, ಇನ್ನಿತರ ಶಾರೀರಿಕ ಇತ್ಯಾದಿ ಹೆಚ್ಚು. ಪರಿಣಾಮವಾಗಿ ಹಸಿವು ಸಹ ತಿಂದಷ್ಟು ಸಾಲದೆಂಬ ರೀತಿಯದು. ಆ ವಿದ್ಯಾರ್ಥಿಗಳು ತಂದಿದ್ದ ಬುತ್ತಿ ಊಟದ ಸಂದರ್ಭದಲ್ಲಿ ಕ್ಷಣಾರ್ಧದಲ್ಲಿ ಖಾಲಿಯಾಯಿತು. ಡಾ. ಕೇಶವ ಬಲಿರಾಮ್ ಹೆಡಗೇವಾರ್ ಅದನ್ನು ಗಮನಿಸಿದರು. ಅವರು ಆ ಇಬ್ಬರು ಬಾಲ ವಿದ್ಯಾರ್ಥಿಗಳನ್ನು ತಮ್ಮ ಬಳಿ ಕೂರಿಸಿಕೊಂಡು ತಮ್ಮ ಬುತ್ತಿಯಲ್ಲಿ ಅವರಿಗೂ ಪಾಲುಕೊಟ್ಟರು. ಸಣ್ಣ ಸಣ್ಣ ಸಂಗತಿಗಳಲ್ಲೂ ಅಂತಹ ಸೂಕ್ಷ್ಮ ದೃಷ್ಟಿ ಮತ್ತು ಜತೆಯಲ್ಲಿರುವವರ ಕಷ್ಟ ಗುರುತಿಸಿ ಸಂದಿಸುವ ಮನೋಭಾವ ಅವರದಾಗಿತ್ತು.

## ಪುಸ್ತಕ ಪರಿಚಯ

### ಅಯೋಧ್ಯಾ ಸಚಿತ್ರ ರಾಮಾಯಣ

**ಪ್ರಕಾಶನ:** ಅಯೋಧ್ಯಾ ಬುಕ್ಸ್
**ಬೆಲೆ:** ರೂ. 499

ಅಯೋಧ್ಯಾ ಫೌಂಡೇಶನ್‌ನ ಹೆಮ್ಮೆಯ ಪ್ರಕಟಣೆ 'ಅಯೋಧ್ಯಾ ಸಚಿತ್ರ ರಾಮಾಯಣ'. ಈ ಪುಸ್ತಕ ಮೂಲ ಶ್ರೀಮದ್ವಾಲ್ಮೀಕಿರಾಮಾಯಣಕ್ಕೆ ನಿಷ್ಠವಾಗಿದೆ. ಸುಮಾರು 125 ವರ್ಣಚಿತ್ರಗಳ ಮೂಲಕ ರಾಮಾಯಣ ಕತೆಯನ್ನು ನಿರೂಪಿಸುವ ಪ್ರಯತ್ನವನ್ನು ಈ ಪುಸ್ತಕ ಮಾಡುತ್ತದೆ. ವಿದ್ವಾನ್




ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ ಅವರ ಬರಹಕ್ಕೆ ಖ್ಯಾತ ಕಲಾವಿದ ಶ್ರೀ ನೀರ್ನಳ್ಳಿ ಗಣಪತಿ ಹೆಗಡೆ ಅವರ ಚಿತ್ರಗಳಿವೆ. ಮೂಲ ರಾಮಾಯಣದ ಯಾವ ಮುಖ್ಯ ವಿವರಣೆಯನ್ನೂ ಕೈಬಿಡದೆ ಅತ್ಯಂತ ಸರಳ ಭಾಷೆಯಲ್ಲಿ, ಚಿತ್ರವತ್ತಾಗಿ ಕತೆಯನ್ನು ನಿರೂಪಿಸಿರುವುದು ಈ ಪುಸ್ತಕದ ವಿಶೇಷ. ಆಕರ್ಷಕ ವರ್ಣಚಿತ್ರಗಳು, ಕಾಫಿ ಟೇಬಲ್ ಪುಸ್ತಕದ ಗಾತ್ರ, ನಯವಾದ ಹಾಳೆಗಳು ಈ ಕೃತಿಯನ್ನು ಆಕರ್ಷಕಗೊಳಿಸಿದೆ. ಮಕ್ಕಳಷ್ಟೇ ಅಲ್ಲ ಹಿರಿಯರಿಗೂ ಇಷ್ಟವಾಗುವ ಚಿತ್ರ–ವಿವರಣೆ–ಗುಣಮಟ್ಟವನ್ನು ಪುಸ್ತಕ ಒಳಗೊಂಡಿದೆ. ಪ್ರತಿಯೊಂದು ಮನೆಯಲ್ಲೂ ಇರಲೇಬೇಕಾದ ಸಂಗ್ರಹಯೋಗ್ಯ ಸಾರ್ವಕಾಲಿಕ ರಾಮಾಯಣ ಗ್ರಂಥವಿದು.

ವೆಬ್ ಸೈಟ್: https://www.ayodhyabooks.com/product/ayodhya-sachitra-ramayana-kannada/

ಸಂಪಾದಕೀಯ ಸಹಕಾರ: ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಮೇಘ ಪ್ರಮೋದ್, ದೀಕ್ಷಿತ್ ನಾಯರ್ ಮಂಡ್ಯ

## ಸಾಲುದ್ದದ ಸುದ್ದಿಗಳು

### ಯುಎಸ್ ವಾಲ್‌ಮಾರ್ಟ್ ಮಳಿಗೆಗಳಲ್ಲಿ ಮೊದಲ ಮೇಡ್ ಇನ್ ಇಂಡಿಯಾ ಸೈಕಲ್




ಯುಎಸ್ ಮಾರುಕಟ್ಟೆಯ ಆಯ್ದ ಮಳಿಗೆಗಳಲ್ಲಿ ಮೊದಲ ಮೇಡ್ ಇನ್ ಇಂಡಿಯಾ ಬೈಸಿಕಲ್‌ಗಳು ಲಭ್ಯವಿರುತ್ತವೆ ಎಂದು ವಾಲ್‌ಮಾರ್ಟ್ ಪ್ರಕಟಿಸಿದೆ. ಅಮೆರಿಕದಲ್ಲಿರುವ ಭಾರತದ ರಾಯಭಾರಿ ತರಂಜಿತ್ ಸಿಂಗ್ ಸಂಧು ಅವರು ಅಮೆರಿಕದ ವಾಲ್‌ಮಾರ್ಟ್‌ನಲ್ಲಿ ಮೇಡ್-ಇನ್-ಇಂಡಿಯಾ ಬೈಸಿಕಲ್‌ಗಳನ್ನು ಬಿಡುಗಡೆ ಮಾಡಿರುವ ಬಗ್ಗೆ ಶ್ಲಾಘನೆ ವ್ಯಕ್ತಪಡಿಸಿದ್ದಾರೆ ಮತ್ತು ಸಂತೋಷವನ್ನು ಹಂಚಿಕೊಂಡಿದ್ದಾರೆ. ಈ ಉಪಕ್ರಮವು 2027ರ ವೇಳೆಗೆ ವಾರ್ಷಿಕವಾಗಿ $10 ಬಿಲಿಯನ್‌ಗೆ ಮೂರು ಪಟ್ಟು ರಫ್ತು ಮಾಡುವ ವಾಲ್‌ಮಾರ್ಟ್‌ನ ಬದ್ಧತೆಯ ಭಾಗವಾಗಿದೆ.

### 8 ಪಟ್ಟು ವೃದ್ಧಿಸಿದ ಭಾರತದ ಜೈವಿಕ ಆರ್ಥಿಕತೆ

ಕಳೆದ ಎಂಟು ವರ್ಷಗಳಲ್ಲಿ ಭಾರತದ 'ಜೈವಿಕ ಆರ್ಥಿಕತೆ' 10 ಶತಕೋಟಿ ಡಾಲರ್‌ನಿಂದ 80 ಶತಕೋಟಿ ಡಾಲರ್‌ಗೆ ಬೆಳೆದಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಹೇಳಿದ್ದಾರೆ. ಮುಂಬರುವ ದಿನಗಳಲ್ಲಿ ಜೈವಿಕ ತಂತ್ರಜ್ಞಾನವು ಆರೋಗ್ಯ ರಕ್ಷಣೆಗೆ ದೊಡ್ಡ ಅಡಿಪಾಯವಾಗಲಿದೆ. ಬಯೋ ಅಗ್ರಿಕಲ್ಚರ್ ಮತ್ತು ಬಯೋ ಫಾರ್ಮಾಸ್ಯುಟಿಕಲ್ಸ್, ಬಯೋ ಸೇವೆಗಳು ದೇಶದಲ್ಲಿ ವೇಗವಾಗಿ ಬೆಳೆಯುತ್ತಿರುವ ಉದಯೋನ್ಮುಖ ಕ್ಷೇತ್ರಗಳಾಗಿವೆ ಎಂದು ಸಚಿವರು ಹೇಳಿದರು. ಭಾರತವು ಶೀಘ್ರದಲ್ಲೇ ವಿಶ್ವದ ಟಾಪ್ 10 ಜೈವಿಕ ಆರ್ಥಿಕತೆಗಳಲ್ಲಿ ಒಂದಾಗಲಿದೆ ಎಂದು ಅವರು ಹೇಳಿದರು.

### ಸಿಯಾಚಿನ್‌ನಲ್ಲಿ ಮೊದಲ ಮಹಿಳಾ ವೈದ್ಯಾಧಿಕಾರಿ ನಿಯೋಜನೆ

ವಿಶ್ವದ ಅತಿ ಎತ್ತರದ ಯುದ್ಧಭೂಮಿ ಎಂದು ಕರೆಯಲ್ಪಡುವ ಸಿಯಾಚಿನ್‌ನಲ್ಲಿ ಮೊದಲ ಮಹಿಳಾ ವೈದ್ಯಕೀಯ ಅಧಿಕಾರಿಯಾಗಿ, ಕ್ಯಾಪ್ಟನ್ ಗೀತಿಕಾ ಕೌಲ್ ನಿಯೋಜಿತಗೊಂಡಿದ್ದಾರೆ. ಕಾಶ್ಮೀರದಿಂದ ಬಂದ ಕ್ಯಾಪ್ಟನ್ ಕೌಲ್ ಅವರು ಸಿಯಾಚಿನ್ ಬ್ಯಾಟಲ್ ಸ್ಕೂಲ್‌ನಲ್ಲಿ ಕಠಿಣ ತರಬೇತಿಯನ್ನು ಪಡೆದುಕೊಂಡಿದ್ದಾರೆ. ಹಿಮನದಿಯಲ್ಲಿನ ಸವಾಲಿನ ಪರಿಸ್ಥಿತಿಗಳಿಗೆ ಒಗ್ಗಿಕೊಳ್ಳುವಲ್ಲಿ ತನ್ನ ಅಚಲ ಬದ್ಧತೆ ಮತ್ತು ದೃಢ ಸ್ಥಿತಿಸ್ಥಾಪಕತ್ವವನ್ನು ಪ್ರದರ್ಶಿಸಿದ್ದಾರೆ. ಅಪಾಯಕಾರಿ ಅಡೆತಡೆಗಳ ಹೊರತಾಗಿಯೂ, ಹಿಮನದಿಯಲ್ಲಿ ನೆಲೆಸಿರುವ ಪಡೆಗಳಿಗೆ ನಿರ್ಣಾಯಕ ವೈದ್ಯಕೀಯ ಆರೈಕೆಯನ್ನು ಒದಗಿಸಲು ಕ್ಯಾಪ್ಟನ್ ಕೌಲ್ ಸಿದ್ಧವಾಗಿದ್ದಾರೆ.



### ಸಿಮ್‌ಗೆ ಬಯೋಮೆಟ್ರಿಕ್ ಕಡ್ಡಾಯ ಮಸೂದೆ ಪಾಸ್



ಮಹತ್ವದ ಟೆಲಿಕಾಂ ಮಸೂದೆಗೆ ಲೋಕಸಭೆ ಅಂಗೀಕಾರ ನೀಡಿದೆ. ಸಾರ್ವಜನಿಕ ಹಿತಾಸಕ್ತಿ ಮತ್ತು ಭದ್ರತೆಯ ದೃಷ್ಟಿಯಿಂದ ಇನ್ನು ಮುಂದೆ ಸಿಮ್ ಕಾರ್ಡ್ ಪಡೆಯಲು ಬಯೋಮೆಟ್ರಿಕ್ ಕಡ್ಡಾಯವಾಗಲಿದೆ. ಅಲ್ಲದೇ ಫೋನ್ ಕದ್ದಾಲಿಕೆಗೆ 3 ವರ್ಷ ಜೈಲು ಮತ್ತು 2 ಕೋಟಿ ರು. ದಂಡ ವಿಧಿಸಲಾಗುತ್ತದೆ. ಇದಕ್ಕಾಗಿ ತುರ್ತು ಸಂದರ್ಭ ಅಥವಾ ಸಾರ್ವಜನಿಕ ಹಿತಾಸಕ್ತಿಯ ಸಂದರ್ಭಗಳಲ್ಲಿ ಯಾವುದೇ ಟೆಲಿಕಾಂ ಕಂಪನಿಯ ಮೊಬೈಲ್ ನೆಟ್‌ವರ್ಕ್ ವಶಪಡಿಸಿಕೊಳ್ಳುವ ಅಧಿಕಾರವನ್ನು ಈ ಮಸೂದೆ ಕೇಂದ್ರ ಸರ್ಕಾರಕ್ಕೆ ನೀಡುತ್ತದೆ.

### ಮಥುರಾ ಮಸೀದಿ ಸರ್ವೇಗೆ ತಡೆ ನೀಡಲು 'ಸುಪ್ರೀಂ' ನಕಾರ

ಮಥುರಾದ ಕೃಷ್ಣ ದೇಗುಲದ ಆವರಣದಲ್ಲಿರುವ ಶಾಹಿ ಈದ್ಗಾ ಮಸೀದಿಯ ಸರ್ವೇಕ್ಷಣೆಗೆ ತಡೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಮಥುರಾದ ಶಾಹಿ ಈದ್ಗಾ ಮಸೀದಿಯನ್ನು 13.37 ಎಕರೆ ಪ್ರದೇಶದಲ್ಲಿ ಕೃಷ್ಣ ಜನ್ಮಭೂಮಿ ಆವರಣದಲ್ಲಿರುವ ಕೇಶವ ದೇಗುಲವನ್ನು ಒಡೆದು ಕಟ್ಟಿರುವ ಕುರಿತು ಸಂದೇಹಗಳು ಇರುವುದರಿಂದ ಅದನ್ನು ಸರ್ವೇಕ್ಷಣೆ ಮಾಡಲು ಅಲಹಾಬಾದ್ ಹೈಕೋರ್ಟ್ ಹಸಿರು ನಿಶಾನೆ ತೋರಿದ್ದ ಬೆನ್ನಲ್ಲೇ ಈ ಆದೇಶಕ್ಕೆ ತಡೆ ನೀಡಬೇಕೆಂದು ಕೋರಿ ಪ್ರತಿವಾದಿ ಮುಸ್ಲಿಂ ಸಮಿತಿಯವರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

### ಯುನೆಸ್ಕೋ ಅಮೂರ್ತ ಸಾಂಸ್ಕೃತಿಕ ಪರಂಪರೆ ಪಟ್ಟಿಗೆ ಗರ್ಬಾ



ಗುಜರಾತಿನ ಗರ್ಬಾವನ್ನು ಯುನೆಸ್ಕೋ ಅಮೂರ್ತ ಸಾಂಸ್ಕೃತಿಕ ಪರಂಪರೆ ಪಟ್ಟಿಗೆ ಸೇರ್ಪಡೆಗೊಳಿಸಿದೆ. ಬೋಟ್ಸ್ವಾನಾದ ಕಸಾನೆಯಲ್ಲಿರುವ ಕ್ರೆಸ್ಟಾ ಮೊವಾನಾ ರೆಸಾರ್ಟ್‌ನಲ್ಲಿ ನಡೆಯುತ್ತಿರುವ ಅಮೂರ್ತ ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆಗಾಗಿ ಅಂತರ್ ಸರ್ಕಾರಿ ಸಮಿತಿಯ 18ನೇ ಅಧಿವೇಶನದಲ್ಲಿ ಗರ್ಬಾವನ್ನು ಅಮೂರ್ತ ಪರಂಪರೆ ಎಂದು ಘೋಷಿಸುವ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ಗುಜರಾತ್‌ನ ಗರ್ಬಾ ಈ ಪಟ್ಟಿಗೆ ಸೇರುತ್ತಿರುವ ಭಾರತದ 15ನೇ ವಿಷಯವಾಗಿದೆ.

### ಆರ್ಟಿಕಲ್ 370 ರದ್ದು ಮಾನ್ಯಗೊಳಿಸಿದ ಸುಪ್ರೀಂ

ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷಾಧಿಕಾರ ನೀಡಲಾಗಿದ್ದ ಸಂವಿಧಾನದ ಆರ್ಟಿಕಲ್ 370 ವಿಧಿ ರದ್ದು ಮಾಡಿದ್ದ ಕೇಂದ್ರ ಸರ್ಕಾರದ ನಿರ್ಧಾರ ಸರಿ ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿದೆ. ಆರ್ಟಿಕಲ್ 370 ಅಡಿ ವಿಶೇಷಾಧಿಕಾರ ನೀಡಿಕೆ ತಾತ್ಕಾಲಿಕ ನಿರ್ಧಾರವಷ್ಟೇ ಆಗಿತ್ತು ಎಂದು ತಿಳಿಸಿದೆ. ಯುದ್ಧದ ಸಂದರ್ಭದಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷಾಧಿಕಾರ ನೀಡಲಾಗಿತ್ತು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

# ಕರುನಾಡಿನಲ್ಲಿ ಖರ್ಜೂರ ಬೆಳೆದು ಯಶಸ್ವಿಯಾದ ಇಸ್ರೋ ವಿಜ್ಞಾನಿ ದಿವಾಕರ್

ಪ್ರೇರಣಾ

ದಿವಾಕರ್ ಚನ್ನಪ್ಪ ಅವರು ಬೆಂಗಳೂರಿನ ಇಸ್ರೋ (ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ)ದ ಜಲಾನಯನ ಕಾರ್ಯಕ್ರಮದಲ್ಲಿ ಯೋಜನಾ ವಿಜ್ಞಾನಿಯಾಗಿದ್ದವರು. ಪ್ರಸ್ತುತ ತಮ್ಮ ಗ್ರಾಮವಾದ ಚಿಕ್ಕಬಳ್ಳಾಪುರದ ಸಾಗನಹಳ್ಳಿ ಸಾವಯವ ಖರ್ಜೂರ ಕೃಷಿ ಮಾಡುತ್ತಿದ್ದಾರೆ. ಕರ್ನಾಟಕದಲ್ಲಿ ಖರ್ಜೂರದ ಕೃಷಿಯನ್ನು ಪ್ರಾರಂಭಿಸಿದ ಮೊದಲ ರೈತರಾದ ಇವರು ಈ ವರ್ಷ 4200 ಕೆಜಿ ಖರ್ಜೂರವನ್ನು ಕೊಯ್ಲು ಮಾಡಿದ್ದಾರೆ.

2008ರಲ್ಲಿ ಮಸನೋಬು ಫುಕುವೋಕಾ (ಜಪಾನೀಸ್ ತತ್ವಜ್ಞಾನಿ ಮತ್ತು ನೈಸರ್ಗಿಕ ಕೃಷಿಕ) ರವರ 'One Straw Revolution' ಪುಸ್ತಕ ಇವರ ಜೀವನದ ದಿಕ್ಕನ್ನೇ ಬದಲಿಸಿತು. ಈ ಪುಸ್ತಕವು ಇವರಿಗೆ ತನ್ನ ಬೇರುಗಳಿಗೆ ಹಿಂದಿರುಗಿ 'ಮರಳಿ ಮಣ್ಣಿಗೆ' ಎಂಬ ಸಾವಯವ ಕೃಷಿಭೂಮಿಯನ್ನು ಸೃಷ್ಟಿಸಲು ಕಾರಣವಾಯಿತು. ದಿವಾಕರ್ ಅವರ ತಂದೆ ಕೃಷಿಕರಾಗಿದ್ದು, ಸಾಗನಹಳ್ಳಿಯ ತಮ್ಮ ಜಮೀನಿನಲ್ಲಿ ರಾಗಿ, ಜೋಳ ಮತ್ತು ತೊಗರಿ ಬೇಳೆಯನ್ನು ಬೆಳೆಯಲು ರಾಸಾಯನಿಕ ಆಧಾರಿತ ರಸಗೊಬ್ಬರಗಳು ಮತ್ತು ಕೀಟನಾಶಕಗಳನ್ನು ಬಳಸುತ್ತಿದ್ದರು. ಹಾಗೆಯೇ ತಮ್ಮ ಮಗ ಕೃಷಿಯನ್ನು ಅವಲಂಬಿಸುವುದನ್ನು ಇಚ್ಛಿಸಿರಲಿಲ್ಲ. ಆದರೆ ದಿವಾಕರ್ ಕೃಷಿಯನ್ನು ಪ್ರಾರಂಭಿಸಿ ತಂದೆಯಂತೆಯೇ ರಾಸಾಯನಿಕಗಳನ್ನು ಬಳಸುತ್ತಿದ್ದರು.

2002–03ರಲ್ಲಿ ದಿವಾಕರ್ ಅವರು ಬೆಂಗಳೂರಿನಲ್ಲಿ ಕೃಷಿಮೇಳದಲ್ಲಿ ಭಾಗವಹಿಸಿದ್ದರು, ಅಲ್ಲಿ ರೈತರೊಬ್ಬರು ತಮಿಳುನಾಡಿನಲ್ಲಿ ಖರ್ಜೂರದ ಕೃಷಿ ಕುರಿತು ಕರಪತ್ರಗಳನ್ನು ಹಂಚಿದ್ದರು. ಈ ರೈತ ಖರ್ಜೂರವನ್ನು ಬೆಳೆಯುತ್ತಿದ್ದ ಧರ್ಮಪುರಿ (ತಮಿಳುನಾಡು) ಹವಾಮಾನವು ಗೌರಿಬಿದನೂರಿನಂತೆಯೇ ಇರುವುದರಿಂದ, ದಿವಾಕರ್ ಅವರಿಗೆ ಈ ಬೆಳೆ ತನಗೆ ಲಾಭದಾಯಕವಾಗಬಹುದು ಎಂಬ ಆತ್ಮವಿಶ್ವಾಸವನ್ನು ನೀಡಿತು.

2009ರಲ್ಲಿ, ತಮ್ಮ ಉಳಿತಾಯವನ್ನು ಬಳಸಿಕೊಂಡು 150 ಖರ್ಜೂರದ ಸಸಿಗಳನ್ನು 3,000 ರೂ.ಗೆ ಖರೀದಿಸಿ ಸಾವಯವ ಕೃಷಿ ಮಾಡಲು ನಿರ್ಧರಿಸಿದರು. ನಂತರದ ದಿನಗಳಲ್ಲಿ ದಿವಾಕರ್ ಅವರು 2.5 ಎಕರೆಯಲ್ಲಿ ಬರ್ಹಿ ತಳಿಯ ಖರ್ಜೂರದ ಸಸಿಗಳನ್ನು ನೆಟ್ಟರು. ಬರ್ಹಿ ತಳಿ ಹಳದಿ ಬಣ್ಣದ ಖರ್ಜೂರವಾಗಿದ್ದು ಫೈಬರ್ ಮತ್ತು ಉತ್ಕರ್ಷಣ ನಿರೋಧಕಗಳಲ್ಲಿ ಸಮೃದ್ಧವಾಗಿದೆ. ದಿವಾಕರ್ ಅವರು ಬೇವಿನ ರೊಟ್ಟಿ, ಆಲದ ಕಾಯಿ, ಜೀವಾಮೃತವನ್ನು ಹಾಕಿ ಸಸಿಗಳನ್ನು ನೆಡಲು ಪ್ರಾರಂಭಿಸಿದರು. ಮೊದಲ ಹೂವು 2013 ರಲ್ಲಿ ಕಾಣಿಸಿಕೊಂಡಿತು ಮತ್ತು ಆ ವರ್ಷ 70 ಸಸಿಗಳು ಅರಳಿದವು. ಒಟ್ಟು 650 ಕೆಜಿ ಉತ್ಪಾದನೆಯಾಗಿತ್ತು.

ಆಗಸ್ಟ್ 2023 ರಲ್ಲಿ ದಿವಾಕರ್ 4,200 ಕೆಜಿ ಖರ್ಜೂರವನ್ನು ಮಾರಾಟ ಮಾಡಿದರು. ಇದೀಗ ಅವರ ಬಳಿ 102 ಗಿಡಗಳು ಹಣ್ಣುಗಳನ್ನು ನೀಡುತ್ತವೆ, ಪ್ರತಿಯೊಂದೂ ಸುಮಾರು 45 ರಿಂದ 50 ಕೆಜಿ ಉತ್ಪಾದಿಸುತ್ತದೆ. ಒಂದು ಎಕರೆಯಲ್ಲಿ, 60 ಗಿಡಗಳು ತಲಾ 45 ಕೆಜಿ ನೀಡಿದರೆ, ಒಟ್ಟು ಇಳುವರಿ 2700 ಕೆಜಿ. ಪ್ರತಿ ಕೆ.ಜಿ.ಗೆ 300 ರೂ.ಗಳ ದರವನ್ನು ಊಹಿಸಿದರೆ, ಒಂದು ಎಕರೆಯಿಂದ ಒಟ್ಟು ಆದಾಯ 8,10,000 ರೂ ಆಗುತ್ತದೆ. ಹಾಳಾಗುವಿಕೆ, ಕೂಲಿ ಮತ್ತು ಕೃಷಿ ಬಂಡವಾಳ ವೆಚ್ಚ ಕಡಿತಗೊಳಿಸಿದ ನಂತರದ ಲಾಭವು ಪ್ರತಿ ಎಕರೆಗೆ ಸುಮಾರು 6 ಲಕ್ಷ ರೂ. ಪ್ರತಿ ವರ್ಷ ಜುಲೈ-ಆಗಸ್ಟ್ ಸಮಯದಲ್ಲಿ ಎರಡು ಬಾರಿ 'ಮರಳಿ ಮಣ್ಣಿಗೆ' ಕಡೆಯಿಂದ ಸುಗ್ಗಿಯ ಹಬ್ಬಕ್ಕೆ ಭೇಟಿ ನೀಡುವ ಗ್ರಾಹಕರು ದಿವಾಕರ್ ಅವರು ಬೆಳೆದ ಅರ್ಧದಷ್ಟು ಸಾವಯವ ಖರ್ಜೂರವನ್ನು ಖರೀದಿಸುತ್ತಾರೆ.



ಇವರ ಯಶಸ್ಸಿಗೆ ಎರಡು ಕಾರಣ ಸಾವಯವ ಕೃಷಿ ಮತ್ತು ಗ್ರಾಹಕರಿಗೆ ನೇರ ಮಾರಾಟ. ದಿವಾಕರ್ ಅವರು ಪಂಚಗವ್ಯ (ಗೋಮೂತ್ರ, ಹಾಲು, ಮೊಸರು, ಬೆಲ್ಲ, ತುಪ್ಪ, ಬಾಳೆಹಣ್ಣು, ತೆಂಗಿನಕಾಯಿ ಮತ್ತು ನೀರು ಮಿಶ್ರಣ), ಅಗ್ನಿ ಅಸ್ತ್ರ (ಗೋಮೂತ್ರ, ತಂಬಾಕು, ಬೇವಿನ ಎಲೆಗಳು ಮತ್ತು ಇತರ ದ್ರವ್ಯಗಳನ್ನು ಸೇರಿಸಿ ಗೊಬ್ಬರ ತಯಾರಿಸುತ್ತಾರೆ. ಜಮೀನಿನಲ್ಲಿ ಹಸಿರೆಲೆ ಗೊಬ್ಬರ, ಜೀವಾಮೃತ ಇತ್ಯಾದಿ ಬಳಸುತ್ತಾರೆ. ಜೀವಾಮೃತವು ಭಾರತೀಯ ಗೋವಿನ ತಳಿಗಳ ವಯಸ್ಸಾದ ಹಸುವಿನ ಸಗಣಿ ಮತ್ತು ಗೋಮೂತ್ರ, ಬೆಲ್ಲ, ಬೇಳೆ ಹಿಟ್ಟು, ನೀರು ಮತ್ತು ಮಣ್ಣಿನಿಂದ ಮಿಶ್ರಣವಾಗಿದೆ. ಇದು ಮಣ್ಣನ್ನು ಸಮೃದ್ಧಗೊಳಿಸುತ್ತದೆ. ಅವರ ಬಳಿ ಹಳ್ಳಿಕಾರ್ ತಳಿಯ ಎಂಟು ದೇಸಿ ಹಸುಗಳಿದ್ದು ಅದರ ಸಗಣಿ ಮತ್ತು ಮೂತ್ರವನ್ನು ಸಾವಯವ ಗೊಬ್ಬರ, ಕೀಟನಾಶಕಗಳು ಮತ್ತು ಸ್ಪ್ರೇಗಳನ್ನು ತಯಾರಿಸಲು ಬಳಸುತ್ತಾರೆ.

ಜೀವಾಮೃತವನ್ನು ತಯಾರಿಸಲು ಬೆಲ್ಲ ಬೇಕಾದ್ದರಿಂದ ಅದನ್ನು ತಯಾರಿಸಲು ಬಳಸುವ ಪದಾರ್ಥಗಳು ಸಹ ಸಾವಯವ ಎಂದು ಖಚಿತಪಡಿಸಿಕೊಳ್ಳಲು ಕಬ್ಬು ಬೆಳೆಯಲು ಪ್ರಾರಂಭಿಸಿದರು. ಈಗ ಅದರಿಂದ ಒಂದು ಟನ್ ಬೆಲ್ಲವನ್ನು ಪಡೆಯುವುದಲ್ಲದೇ ಸ್ವಲ್ಪ ಭಾಗವನ್ನು ಸಾಮಾನ್ಯ ಗ್ರಾಹಕರು ಖರೀದಿಸುತ್ತಾರೆ. ದಿವಾಕರ್ ಅವರು ಸಾವಯವ ರಾಗಿ, ಭತ್ತ, ತೊಗರಿ ಬೇಳೆ, ಮಾವು, ಪೇರಳೆ ಇತ್ಯಾದಿಗಳನ್ನೂ ಬೆಳೆಯುತ್ತಾರೆ. ಅವರ ಸಾವಯವ ಭತ್ತದ ಗದ್ದೆಗಳು ಶಾಲಾ ವಿದ್ಯಾರ್ಥಿಗಳನ್ನು ತಾಯಿಯ ಪ್ರಕೃತಿಯ ಹತ್ತಿರಕ್ಕೆ ಕೊಂಡೊಯ್ಯಲು ಮತ್ತು ಕೃಷಿಯನ್ನು ಅನುಭವಿಸಲು ಅವಕಾಶ ಮಾಡಿಕೊಡುತ್ತಿದೆ.

*"ಸಾವಯವ ಆಹಾರವನ್ನು ಬೆಳೆಯುವುದು ಮತ್ತು ಮುಂದಿನ ಪೀಳಿಗೆಗೆ ಸಾವಯವ ಚಿಂತನೆ ಮತ್ತು ದೃಷ್ಟಿಯನ್ನು ನೀಡುವುದು, ಇದು ನನ್ನ ಕೃಷಿ ಪಯಣದ ಅತ್ಯುತ್ತಮ ಭಾಗವಾಗಿದೆ"*

– ದಿವಾಕರ್, ಕೃಷಿಕ

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th DECEMBER 2023
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23
FORTNIGHTLY 01-01-2024



## ಆರ್ಟಿಕಲ್ 370 ಕುರಿತು ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಸ್ವಾಗತಿಸಿದ ಆರ್‌ಎಸ್‌ಎಸ್



ಆಗಸ್ಟ್ 5, 2019ರಂದು ಸಂಸತ್ತಿನಲ್ಲಿ ಆರ್ಟಿಕಲ್ 370 ರದ್ದತಿಯ ಕುರಿತು ಕೇಂದ್ರ ಸರ್ಕಾರ ತೆಗೆದುಕೊಂಡ ನಿರ್ಧಾರವನ್ನು ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯ ಎತ್ತಿಹಿಡಿದಿದೆ. ಜೊತೆಗೆ ಕಾಶ್ಮೀರದಿಂದ ಲಡಾಖ್ ಅನ್ನು ಪ್ರತ್ಯೇಕಗೊಳಿಸಿದ ತೀರ್ಮಾನವೂ ಸರಿಯಾಗಿದೆ ಎಂದು ಹೇಳಿರುವ ಸರ್ವೋಚ್ಚ ನ್ಯಾಯಾಲಯ 2024ರ ಸೆಪ್ಟೆಂಬರ್ 30ರೊಳಗೆ ಜಮ್ಮು ಕಾಶ್ಮೀರದಲ್ಲಿ ಚುನಾವಣೆ ನಡೆಸಲು ಸೂಚಿಸಿದೆ.

ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘ ಸ್ವಾಗತಿಸಿದೆ. ಈ ಕುರಿತು ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಸುನೀಲ್ ಅಂಬೇಕರ್ ಮಾತನಾಡಿ "ಸರ್ವೋಚ್ಚ ನ್ಯಾಯಾಲಯದ ಮೂಲಕ ಆರ್ಟಿಕಲ್ 370 ರ ರದ್ದತಿ ಕಾನೂನುಬದ್ಧಗೊಳಿಸಿರುವುದು ಸ್ವಾಗತ ಯೋಗ್ಯವಾಗಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘ ಈ ನಿರ್ಣಯವನ್ನು ಸ್ವಾಗತಿಸುತ್ತದೆ. ರಾಷ್ಟ್ರೀಯ ಸ್ವಯಂಸೇವಕ ಸಂಘ ಪ್ರಾರಂಭದಿಂದಲೂ ಆರ್ಟಿಕಲ್ 370ನ್ನು ವಿರೋಧಿಸುತ್ತಲೇ ಬಂದಿದೆ. ಸಂಘವು ಈ ವಿಷಯದ ಕುರಿತು ಕೆಲವು ನಿರ್ಣಯಗಳನ್ನೂ ಅಂಗೀಕರಿಸಿ ಹಲವಾರು ಆಂದೋಲನಗಳಲ್ಲೂ ಭಾಗವಹಿಸಿದೆ. ಈ ನಿರ್ಣಯವು ರಾಷ್ಟ್ರೀಯ ಏಕತೆಯನ್ನು ಬಲಪಡಿಸುತ್ತದೆ. ಆರ್ಟಿಕಲ್ 370ರ ಕಾರಣ ಜಮ್ಮು ಕಾಶ್ಮೀರದಲ್ಲಿ ಅನ್ಯಾಯಕ್ಕೆ ಒಳಗಾದ ಜನರಿಗೆ ಈ ನಿರ್ಣಯದಿಂದ ಮುಕ್ತಿ ದೊರೆತಂತಾಗಿದೆ." ಎಂದರು.

## ಅಯೋಧ್ಯೆಯಲ್ಲಿ ಪ್ರಾಣ ಪ್ರತಿಷ್ಠೆ: ಅಮೇರಿಕಾದ ದೇಗುಲಗಳಲ್ಲಿ ವಾರಪೂರ್ತಿ ಆಚರಣೆ



ಜನವರಿ 22ರಂದು ಅಯೋಧ್ಯೆಯ ರಾಮಮಂದಿರದಲ್ಲಿ ರಾಮಲಲ್ಲಾ ಪ್ರತಿಷ್ಠಾಪನೆಯ ಸ್ಮರಣಾರ್ಥವಾಗಿ ಅಮೇರಿಕಾದ್ಯಂತದ ದೇಗುಲಗಳಲ್ಲಿ ಒಂದು ವಾರದ ಆಚರಣೆಗಳನ್ನು ನಡೆಸಲು ಸಿದ್ಧತೆ ನಡೆಸಲಾಗುತ್ತಿದೆ ಎಂದು ವರದಿಗಳು ತಿಳಿಸಿವೆ.

"ನಾವು ಈ ವಿದ್ಯಮಾನದ ಭಾಗವಾಗಿರುವುದು ನಮ್ಮ ಅದೃಷ್ಟ ಮತ್ತು ಆಶೀರ್ವಾದ ಮತ್ತು ಶತಮಾನಗಳ ಕಾಯುವಿಕೆ ಮತ್ತು ಹೋರಾಟದ ನಂತರ ನಮ್ಮ ಕನಸಿನ ದೇವಾಲಯವು ಸಾಕಾರಗೊಳ್ಳುತ್ತಿದೆ. ಯುಎಸ್ ಮತ್ತು ಕೆನಡಾದಲ್ಲಿ ಪ್ರತಿಯೊಬ್ಬರ ಭಾವನೆಗಳು ತುಂಬಿ ಬಂದಿವೆ. ಶ್ರದ್ಧಾ ಭಕ್ತಿಯಿಂದ ದೇಗುಲ ನಿರ್ಮಿಸಲಾಗಿದೆ ಮತ್ತು ಎಲ್ಲರೂ ಭಗವಾನ್ ಶ್ರೀರಾಮನನ್ನು ಅವನ ಮಂದಿರದಲ್ಲಿ ಸ್ವೀಕರಿಸಲು ಕಾತುರದಿಂದ ಕಾಯುತ್ತಿದ್ದಾರೆ" ಎಂದು ಹಿಂದೂ ಮಂದಿರಗಳ ಸಬಲೀಕರಣ ಮಂಡಳಿ (ಎಚ್‌ಎಂಇಸಿ) ಯ ತೇಜಲ್ ಶಾ ತಿಳಿಸಿದ್ದಾರೆ. ಹಿಂದೂ ಮಂದಿರಗಳ ಸಬಲೀಕರಣ ಮಂಡಳಿ (HMEC) ಯುನೈಟೆಡ್ ಸ್ಟೇಟ್ಸ್‌ನಲ್ಲಿರುವ 1,100 ಕ್ಕೂ ಹೆಚ್ಚು ಹಿಂದೂ ದೇವಾಲಯಗಳನ್ನು ಒಳಗೊಂಡಿದೆ. ಉತ್ತರ ಅಮೇರಿಕಾದ ಸಣ್ಣ ಮತ್ತು ದೊಡ್ಡ ದೇವಾಲಯಗಳಲ್ಲಿ ಆಚರಣೆ ಜನವರಿ 15ರಂದು ಪ್ರಾರಂಭವಾಗಲಿದ್ದು, ಜನವರಿ 20ರ ರಾತ್ರಿ ಅಯೋಧ್ಯೆಯಿಂದ ರಾಮಮಂದಿರ ಉದ್ಘಾಟನೆಯ ನೇರ ಪ್ರಸಾರದೊಂದಿಗೆ ಮುಕ್ತಾಯಗೊಳ್ಳಲಿದೆ ಎಂದು ಅವರು ಹೇಳಿದರು.

## ಹೊಸದುರ್ಗದ ಮಾಜಿ ಶಾಸಕ ಶ್ರೀ ಗೂಳಿಹಟ್ಟಿ ಶೇಖರ್ ಆರೋಪಕ್ಕೆ ಆರ್‌ಎಸ್‌ಎಸ್ ಸ್ಪಷ್ಟನೆ

ಹೊಸದುರ್ಗದ ಮಾಜಿ ಶಾಸಕ ಶ್ರೀ ಗೂಳಿಹಟ್ಟಿ ಶೇಖರ್ ಅವರು ಮಾಡಿರುವ ಆರೋಪದ ಕುರಿತು ರಾಷ್ಟ್ರೀಯ ಸ್ವಯಂಸೇವಕ ಸಂಘ ಪತ್ರಿಕಾ ಪ್ರಕಟಣೆಯ ಮೂಲಕ ಸ್ಪಷ್ಟನೆ ನೀಡಿದೆ. ಪತ್ರಿಕಾ ಪ್ರಕಟಣೆಯಲ್ಲಿ "ಹೊಸದುರ್ಗದ ಮಾಜಿ ಶಾಸಕರಾದ ಶ್ರೀ ಗೂಳಿಹಟ್ಟಿ ಶೇಖರ್ ಅವರ ಆಡಿಯೋ ಹೇಳಿಕೆಯಲ್ಲಿ "ತಮಗೆ ಜಾತಿ ಕಾರಣಕ್ಕೆ ನಾಗಪುರದ ಡಾ. ಹೆಡಗೇವಾರ್ ಸ್ಮಾರಕ ಕಟ್ಟಡದಲ್ಲಿ ಪ್ರವೇಶ ನಿರಾಕರಿಸಲಾಯಿತು" ಎಂದು ಆರೋಪಿಸಿದ್ದಾರೆ. ನಾಗಪುರದಲ್ಲಿ ಸಂಘ ಕಾರ್ಯಾಲಯವನ್ನು ನೋಡಲು ಬಂದವರ ಹೆಸರನ್ನು ನೋಂದಾಯಿಸಿ ಪ್ರವೇಶ ನೀಡುವ ವ್ಯವಸ್ಥೆಯೇ ಇಲ್ಲ. ಇದೊಂದು ನಿರಾಧಾರದ ಹಾಗೂ ಹುರುಳಿಲ್ಲದ ಆರೋಪ."

"ಆರೆಸ್ಸೆಸ್‌ನ ಯಾವುದೇ ಕಛೇರಿಯಲ್ಲಾಗಲಿ, ಅಥವಾ ಈ ರೀತಿಯ ಸ್ಮಾರಕ ಕಟ್ಟಡಗಳಲ್ಲಾಗಲಿ, ಎಲ್ಲರಿಗೂ ಮುಕ್ತ ಪ್ರವೇಶವಿದೆ. ಎಲ್ಲಾ ಜಾತಿ, ವರ್ಗದ ಸಾವಿರಾರು ಜನ ನಿತ್ಯ ಬಂದು ಹೋಗುತ್ತಲೇ ಇದ್ದಾರೆ. ಯಾರಿಗೂ ಪ್ರವೇಶ ನಿರಾಕರಣೆಯ ಪ್ರಶ್ನೆಯೇ ಬಂದಿಲ್ಲ. ಇಷ್ಟಾಗಿ ರಾಜ್ಯ ವಿಧಾನಸಭಾ ಚುನಾವಣೆಗೆ ನಾಲ್ಕು ತಿಂಗಳು ಮೊದಲು ಈ ಘಟನೆ ನಡೆದಿತ್ತು ಎನ್ನುವ ಶ್ರೀ ಗೂಳಿಹಟ್ಟಿ ಶೇಖರ್ ಅವರು ಆನಂತರ ಅನೇಕ ಸಂಘದ ಪ್ರಮುಖರನ್ನು ಭೇಟಿಯಾದರೂ ಎಲ್ಲಿಯೂ ತಮಗಾದ ಈ ಅವಮಾನದ ಬಗ್ಗೆ ಹೇಳಿರಲಿಲ್ಲ. ಈಗ ಹತ್ತು ತಿಂಗಳ ನಂತರ ಈ ರೀತಿ ಹೇಳಿಕೆ ನೀಡಿರುವುದು ಆಶ್ಚರ್ಯಕರವಾಗಿದೆ." ಎಂದು ತಿಳಿಸಿದೆ. ಮತ್ತು " ರಾಷ್ಟ್ರೀಯ ಸ್ವಯಂಸೇವಕ ಸಂಘವು ಎಲ್ಲರನ್ನೂ ಸದಾ ತೆರೆದ ಮನಸ್ಸಿನಿಂದ ಸ್ವಾಗತಿಸುತ್ತದೆ" ಎಂದು ಸ್ಪಷ್ಟೀಕರಣ ನೀಡಿದೆ.

## ವಿಶ್ವದ ಮೊದಲ ಯಶಸ್ವಿ ಬೋನ್ ಮ್ಯಾರೋ ಟ್ರಾನ್ಸ್‌ಪ್ಲಾಂಟ್ ಮಾಡಿದ ಭಾರತದ ಸೇನಾ ಆಸ್ಪತ್ರೆ



ಪ್ರೈಮರಿ ಇಮ್ಯುನೊ ಡಿಫಿಷಿಯನ್ಸಿ ಡಿಸಾರ್ಡರ್‌ನಿಂದ ಬಳಲುತ್ತಿರುವ ಮಗುವಿಗೆ ಜೀವ ಉಳಿಸುವ ಬೋನ್ ಮ್ಯಾರೋ ಟ್ರಾನ್ಸ್‌ಪ್ಲಾಂಟ್ ಅನ್ನು ದೆಹಲಿಯ ಸೇನಾ ಆಸ್ಪತ್ರೆಯ ವೈದ್ಯರು ಭಾರತದಲ್ಲಿ ಮೊದಲ ಬಾರಿಗೆ ಯಶಸ್ವಿಯಾಗಿ ನಡೆಸಿದ್ದಾರೆ. ಯೋಧ ಪ್ರದೀಪ್ ಪೌಡೆಲ್ ಅವರ 7 ವರ್ಷ ಪುತ್ರ ARPC1bನಿಂದ ಬಳಲುತ್ತಿರುವುದು ಪತ್ತೆಯಾಯಿತು, ಇದು ಒಂದು ವರ್ಷ ಅವಧಿಯ ಇಮ್ಯುನೊ ಡಿಫಿಷಿಯನ್ಸಿಯ ಅತ್ಯಂತ ಅಪರೂಪದ ರೂಪವಾಗಿತ್ತು. ಇದು ಅವನ ಪ್ರತಿರಕ್ಷಣಾ ವ್ಯವಸ್ಥೆಗೆ ತೀವ್ರವಾಗಿ ಘಾಸಿಗೊಳಿಸಿತ್ತು ಮತ್ತು ಆತ ಮಾರಣಾಂತಿಕ ಸೋಂಕುಗಳು ಮತ್ತು ಇತರ ತೊಡಕುಗಳಿಗೆ ಗುರಿಯಾಗುವಂತೆ ಮಾಡಿತ್ತು. ಆತನನ್ನು ಡಯಾಗ್ನೋಸ್ ಮಾಡಿದ ಸೇನಾ ಆಸ್ಪತ್ರೆಯು ಆರು ತಿಂಗಳೊಳಗೆ Matched Unrelated Donor (MUD) ಟ್ರಾನ್ಸ್‌ಪ್ಲಾಂಟ್ ಮಾಡಿತು ಎಂದು ಸಚಿವಾಲಯ ತಿಳಿಸಿದೆ. ಈ ವಿಧಾನವು ದೋಷಯುಕ್ತ ಪ್ರತಿರಕ್ಷಣಾ ಕೋಶಗಳನ್ನು ಆರೋಗ್ಯಯುತ ಕೋಶಗಳೊಂದಿಗೆ ಬದಲಾಯಿಸುವ ಗುರಿಯನ್ನು ಹೊಂದಿದೆ.

## ವಾರಣಾಸಿಯಲ್ಲಿ ವಿಶ್ವದ ಅತಿದೊಡ್ಡ ಧ್ಯಾನ ಕೇಂದ್ರ

ಪ್ರಧಾನಿ ನರೇಂದ್ರ ಮೋದಿ ಅವರು ವಾರಣಾಸಿಯಲ್ಲಿ ವಿಶ್ವದ ಅತಿದೊಡ್ಡ ಧ್ಯಾನ ಕೇಂದ್ರವಾದ ಸ್ವರವೇದ ಮಹಾಮಂದಿರವನ್ನು ಉದ್ಘಾಟಿಸಿದರು. ಏಕಕಾಲದಲ್ಲಿ 20,000 ಜನರು ಧ್ಯಾನಕ್ಕಾಗಿ ಕುಳಿತುಕೊಳ್ಳಬಹುದಾದ ಕೇಂದ್ರವು ಏಳು ಅಂತಸ್ತಿನ ಮೇಲ್ವಿನ್ಯಾಸವನ್ನು ಹೊಂದಿದೆ. ಮಹಾಮಂದಿರದ ಗೋಡೆಗಳ ಮೇಲೆ ಸ್ವರವೇದ ಶ್ಲೋಕಗಳನ್ನು ಕೆತ್ತಲಾಗಿದೆ.

ಧ್ಯಾನಕೇಂದ್ರ 125-ದಳಗಳ ಕಮಲದ ಗುಮ್ಮಟಗಳೊಂದಿಗೆ ಅದ್ಭುತವಾದ ವಿನ್ಯಾಸವನ್ನು ಹೊಂದಿದೆ ಮತ್ತು 20,000 ಆಸನ ಸಾಮರ್ಥ್ಯವನ್ನು ಹೊಂದಿದೆ, ಇದು ವಿಶ್ವದ ಅತಿದೊಡ್ಡ ಧ್ಯಾನ ಕೇಂದ್ರಗಳಲ್ಲಿ ಒಂದಾಗಿದೆ. ವಾರಣಾಸಿ ನಗರ ಕೇಂದ್ರದಿಂದ ಸರಿಸುಮಾರು 12 ಕಿಮೀ ದೂರದಲ್ಲಿರುವ ಉಮರಹಾ ಪ್ರದೇಶದಲ್ಲಿ ನೆಲೆಗೊಂಡಿರುವ



ಸ್ವರವೇದ ಮಹಾಮಂದಿರವು 3,00,000 ಚದರ ಅಡಿಗಳಷ್ಟು ವಿಸ್ತಾರವಾದ ಪ್ರದೇಶವನ್ನು ಒಳಗೊಂಡಿದೆ.

ಮಹಾಮಂದಿರಕ್ಕೆ 2004ರಲ್ಲಿ ಸದ್ಗುರು ಆಚಾರ್ಯ ಸ್ವತಂತ್ರ ದೇವ್ ಮತ್ತು ಸಂತ ಪ್ರವರ ವಿಜ್ಞಾನ ದೇವ್ ಅವರು ಅಡಿಪಾಯ ಹಾಕಿದರು. 600 ಕಾರ್ಮಿಕರು ಮತ್ತು 15 ಎಂಜಿನಿಯರ್‌ಗಳ ಸಹಯೋಗದೊಂದಿಗೆ ಈ ಧ್ಯಾನ ಕೇಂದ್ರ ನಿರ್ಮಾಣವಾಗಿದೆ. ಧ್ಯಾನಮಂದಿರ 101 ಕಾರಂಜಿಗಳ ಜೊತೆಗೆ ಸಂಕೀರ್ಣವಾದ ಕೆತ್ತನೆಗಳೊಂದಿಗೆ ತೇಗದ ಮರದ ಛಾವಣಿಗಳು ಮತ್ತು ಬಾಗಿಲುಗಳನ್ನು ಒಳಗೊಂಡಿದೆ. ಮಹಾಮಂದಿರದ ಗೋಡೆಗಳ ಮೇಲೆ ಸ್ವರವೇದದ ಶ್ಲೋಕಗಳನ್ನು ಕೆತ್ತಲಾಗಿದೆ.

ಪಿಂಕ್ ಮರಳುಗಲ್ಲುಗಳು ಗೋಡೆಗಳನ್ನು ಅಲಂಕರಿಸಿವೆ ಮತ್ತು ಔಷಧೀಯ ಗಿಡಮೂಲಿಕೆಗಳನ್ನು ಹೊಂದಿರುವ ಸುಂದರವಾದ ಉದ್ಯಾನವನವು ಕಟ್ಟಡದ ಭವ್ಯತೆಯನ್ನು ಹೆಚ್ಚಿಸಿದೆ. ಸದ್ಗುರು ಶ್ರೀ ಸದಾಫಲ್ ದಿಯೋಜಿ ಮಹಾರಾಜ್, ಸನಾತನ ಯೋಗಿ ಮತ್ತು ವಿಹಂಗಮ ಯೋಗದ ಸ್ಥಾಪಕರಿಂದ ರಚಿಸಲ್ಪಟ್ಟ ಆಧ್ಯಾತ್ಮಿಕ ಪಠ್ಯವಾದ ಸ್ವರವೇದದ ಹೆಸರನ್ನು ಈ ಮಂದಿರಕ್ಕೆ ಇಡಲಾಗಿದೆ.

ಸ್ವರವೇದ ಮಹಾಮಂದಿರವು "ಮನುಕುಲವನ್ನು ಅದರ ಭವ್ಯವಾದ ಆಧ್ಯಾತ್ಮಿಕ ಸೆಳವುಗಳಿಂದ ಬೆಳಗಿಸಲು ಮತ್ತು ಜಗತ್ತನ್ನು ಶಾಂತಿಯುತ ಎಚ್ಚರಿಕೆಯ ಸ್ಥಿತಿಯಲ್ಲಿ ಇರಿಸುವ" ಗುರಿಯನ್ನು ಹೊಂದಿದೆ.

## ಉಗ್ರ ಸಂಘಟನೆ ವಿರುದ್ಧ ಶೂನ್ಯ ಸಹಿಷ್ಣುತಾ ಕ್ರಮಕ್ಕೆ ವಿಶ್ವಸಂಸ್ಥೆಯಲ್ಲಿ ಭಾರತ ಮನವಿ




ವಿಶ್ವಸಂಸ್ಥೆಯಲ್ಲಿನ ಭಾರತದ ಖಾಯಂ ಪ್ರತಿನಿಧಿ ರುಚಿರಾ ಕಾಂಬೋಜ್ ಅವರು ಭಯೋತ್ಪಾದಕ ಸಂಘಟನೆಗಳು ಮತ್ತು ಅವರಿಗೆ ಧನಸಹಾಯ ನೀಡುವವರ ವಿರುದ್ಧ ಶೂನ್ಯ ಸಹಿಷ್ಣುತೆಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ವಿಶ್ವಸಂಸ್ಥೆಯನ್ನು ಒತ್ತಾಯಿಸಿದ್ದಾರೆ. ನ್ಯೂಯಾರ್ಕ್‌ನಲ್ಲಿ ನಡೆದ ಗಿಖಿಖಅ ಓಪನ್ ಡಿಬೇಟ್ ಆನ್ ಸ್ಮಾಲ್ ಆರ್ಮ್ಸ್ ಅನ್ನು ಉದ್ದೇಶಿಸಿ ಮಾತನಾಡಿದ ಅವರು, ಸಣ್ಣ ಶಸ್ತ್ರಾಸ್ತ್ರಗಳು ಮತ್ತು ಲಘು ಶಸ್ತ್ರಾಸ್ತ್ರಗಳು ಮತ್ತು ಸಂಬಂಧಿತ ಮದ್ದುಗುಂಡುಗಳಿಗೆ ಅಕ್ರಮ ಸಾಗಣೆಯು ಸಶಸ್ತ್ರ ಮತ್ತು ಭಯೋತ್ಪಾದಕ ಗುಂಪುಗಳು ಸಂಘರ್ಷಗಳಲ್ಲಿ ತೊಡಗುವುದಕ್ಕೆ ಕಾರಣವಾಗುತ್ತಿದೆ. ಅಂತಹ ಭಯೋತ್ಪಾದಕ ಸಂಘಟನೆಗಳು ಹೊಂದಿರುವ ಶಸ್ತ್ರಗಳ ಪ್ರಮಾಣ ಮತ್ತು ಗುಣಮಟ್ಟದ ಹೆಚ್ಚಳವು ಅವರಿಗೆ ರಾಷ್ಟ್ರಗಳ ಬೆಂಬಲ ಮತ್ತು ಪ್ರಾಯೋಜಕತ್ವ ಇದೆ ಎಂಬುದನ್ನು ನೆನಪಿಸುತ್ತದೆ ಎಂದು ಕಾಂಬೋಜ್ ಹೇಳಿದ್ದಾರೆ.

ಎಲ್ಲಾ ಯುದ್ಧ ಸಾಮಗ್ರಿಗಳು ಮತ್ತು ಸಂಬಂಧಿತ ವಸ್ತುಗಳ ರಫ್ತು ನಿಯಂತ್ರಿಸಲು ಭಾರತದ ಪ್ರಯತ್ನಗಳನ್ನು ತಿಳಿಸಿದ ಅವರು, ವಾಸ್ಸೆನಾರ್ ಅರೇಂಜ್‌ಮೆಂಟ್‌ನಲ್ಲಿ ಭಾರತದ ಭಾಗವಹಿಸುವಿಕೆಯನ್ನು ಹಂಚಿಕೊಂಡರು. ಭಾರತವು ಅದರ ಪ್ರಕಾರವೇ, ಯುಎನ್ ಪ್ರೋಗ್ರಾಂ ಆಫ್ ಆಕ್ಷನ್ ಮತ್ತು ಅಂತರರಾಷ್ಟ್ರೀಯ ಟ್ರೇಸಿಂಗ್ ಉಪಕರಣದ ಅನುಷ್ಠಾನವನ್ನು ಬಲಪಡಿಸಲು ರಾಷ್ಟ್ರೀಯ ಮತ್ತು ಜಾಗತಿಕ ಮಟ್ಟದಲ್ಲಿ ಪ್ರಯತ್ನಗಳನ್ನು ದ್ವಿಗುಣಗೊಳಿಸುವುದನ್ನು ಬೆಂಬಲಿಸುತ್ತದೆ ಎಂದು ಹೇಳಿದರು.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.